# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಮಂಗಳವಾರ, ಸೆಪ್ಟೆಂಬರ್ 24, 2024

ಸಂಪುಟ : 51 ಸಂಚಿಕೆ : 132 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಶ್ರೀಮತಿ ಭಾನುಮತಿ ನಿಧನ



ರವಿ ನರ್ಸಿಂಗ್ ಹೋಮ್ (ಕೆಂಚಪ್ಪ ಆಸ್ಪತ್ರೆ)ಯ ದಿ|| ಡಾ|| ಎ. ಕೆಂಚಪ್ಪ ಮತ್ತು ದಿ|| ಶ್ರೀಮತಿ ಹಾಲಮ್ಮನವರ ನಾಲ್ಕನೇ ಪುತ್ರರಾದ ಶ್ರೀ ಕೆ. ಶಶಿಧರರವರ ಧರ್ಮಪತ್ನಿ

**ಶ್ರೀಮತಿ ಭಾನುಮತಿ** ಅವರು,

ದಿನಾಂಕ 23-9-2024ರ ಸೋಮವಾರ ರಾತ್ರಿ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 58 ವರ್ಷ ವಯಸ್ಸಾಗಿತ್ತು. ಮೃತರ ಪಾರ್ಥಿವ ಶರೀರವನ್ನು ದಿನಾಂಕ 24-9-2024ರ ಮಂಗಳವಾರ ಮಧ್ಯಾಹ್ನ 1.30 ಗಂಟೆಯವರೆಗೆ ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್ 12ನೇ ಮೇನ್, (# 3296/1) ಬಾಪೂಜಿ ಹೈಸ್ಕೂಲ್ ಹತ್ತಿರದ ಅವರ ನಿವಾಸದಲ್ಲಿ ಇರಿಸಲಾಗುವುದು. ನಂತರ 2 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ (ಗ್ಲಾಸ್‌ಹೌಸ್ ಹಿಂಭಾಗ) ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.

### ದುಃಖತಪ್ತ ಕುಟುಂಬ ವರ್ಗ

- ಪತಿ : ಕೆ. ಶಶಿಧರ್ ಅಕ್ಕೇರ ಮತ್ತು ಮಕ್ಕಳಾದ ✦ ಶ್ರೀಮತಿ ನಿರೀಕ್ಷ, ಮಧುಸೂದನ ✦ ಚಿ|| ನಿರ್ಮಿತ್ ಅಕ್ಕೇರ
- ಶ್ರೀಮತಿ ವಿಜಯಲಕ್ಷ್ಮಿ ಮತ್ತು ಡಾ|| ಕೆ. ಶ್ರೀನಿವಾಸರೆಡ್ಡಿ ಹಾಗೂ ಮಕ್ಕಳು
- ಶ್ರೀಮತಿ ಯಶೋಧ ಮತ್ತು ಕೆ. ರಾಜಗೋಪಾಲರೆಡ್ಡಿ ಹಾಗೂ ಮಕ್ಕಳು
- ಶ್ರೀಮತಿ ಆಶಾ ಮತ್ತು ಡಾ. ರವಿಕುಮಾರ್ ಹಾಗೂ ಮಕ್ಕಳು
- ಶ್ರೀಮತಿ ಸುಜಾತ ಮತ್ತು ಡಾ|| ಧರ್ಮರೆಡ್ಡಿ ಹಾಗೂ ಮಕ್ಕಳು
- ಶ್ರೀಮತಿ ಜ್ಯೋತಿ ಮತ್ತು ಕಿರಣ್ ಕೊನಾಕಿ ಹಾಗೂ ಸಹೋದರಿಯರು
- ಅಕ್ಕೇರ ವಂಶಸ್ಥರು ಮತ್ತು ಕೊನಾಕಿ ವಂಶಸ್ಥರು, ಕಪ್ಪನಹಳ್ಳಿ

**ರವಿ ನರ್ಸಿಂಗ್ ಹೋಮ್ (ಕೆಂಚಪ್ಪ ಆಸ್ಪತ್ರೆ) ಸಿಬ್ಬಂದಿ ವರ್ಗ**
**ಮೊ. : 99099 66339, 94480 42855, 94480 25410**

## ಭಾವಪೂರ್ಣ ಶ್ರದ್ಧಾಂಜಲಿ



ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ, ಜೆಡಿಎಸ್ ಧುರೀಣರೂ, ಅಹಿಂದ ವರ್ಗದ ಹಾಗೂ ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಹಿರಿಯ ಮುಖಂಡರೂ, ಹಿರಿಯ ಕುಸ್ತಿಪಟುಗಳು, ದಾವಣಗೆರೆ ಸಮಗ್ರ ಅಭಿವೃದ್ಧಿಗೆ ಕಾರಣರಾದ

**ಶ್ರೀ ಟಿ. ದಾಸಕರಿಯಪ್ಪ**

ಅವರು, ದಿನಾಂಕ 22.09.2024ರಂದು ರಾತ್ರಿ ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.



**ಶ್ರೀ ವಿನಯ್ ಕುಮಾರ್ ಜಿ.ಬಿ.,**
ಸಂಸ್ಥಾಪಕರು ಹಾಗೂ ನಿರ್ದೇಶಕರು,
ಇನ್‌ಸೈಟ್ಸ್ ಐಎಎಸ್ ಸಂಸ್ಥೆ, ಬೆಂಗಳೂರು.


Srishyla Educational Trust ®

**GM University**

P.B Road, Davanagere-577006

Innovating Minds

"Igniting Innovation, Inspiring Transformation"




**GMU-Advantage**

. Industry Integrated Outcome Based Curriculum
. Holistic Development Hub
. Digital Campus for 21st Century Learning
. Global Immersion Programs
. Innovation and Entrepreneurship Incubator

**Join us by choosing the right program in GM University**

**GM School of Advanced Studies**
M.Tech. in
Data Engineering
Deep Learning
Artificial Intelligence in Healthcare
Computer Aided Structural Engineering (CASE)

**Faculty of Basic and Applied Sciences**
MSc. in
Physics
Chemistry
Mathematics

**Faculty of Engineering & Technology**
School of Computer Science & Technology
B. Tech. in
E303BW Computer Science & Engg. (CSE)
E303CU Information Science & Engg. (ISE)
E303LE Computer Science-AI & ML (CS-AIML)
E303LD Computer Science-Data Science (CS-DS)
E303LG Computer Science-Cyber Security (CS-CY)
E303LF Computer Science-Cloud Computing (CS-CC)
E303LH Computer Science-Information Security (CS-IS)
E303LJ Computer Science-Business Systems (CS-BS)
E303LK Computer Science-IOT (CS-IO)

School of Engineering
B. Tech. in
E303BB Electronics & Communication Engg. (E & CE)
E303BJ Electrical & Electronics Engg. (EEE)
E303RA Robotics & Automation (RA)
E303YH Engineering Design (ED)
E303CE Civil Engineering (CE)
E303BT Biotechnology (BT)

**Faculty of Commerce & Management**
B Com Accounting and Finance (PD-AF)
B Com Banking and Insurance (PD-BINS)
B Com Accounting and Taxation (PD-ATAX)
B Com General (PD-Gen)
BBA. Digital Marketing and social media (PD-DMSM)
BBA Business Analytics (PD-BA)
BBA Logistics and Supply Chain Management (PD-LSCM)
BBA Innovation and Entrepreneurship (PD-IE)
BBA Human Resource Management (PD-HRM)
BBA General Management (PD-GM)
BBA Marketing and Sales (PD-MS)

**Faculty of Computing & IT**
MCA-Computer Applications
MSc-Data Science
MSc-AI & Data Analytics
MSc-Cyber Security

**Faculty of Commerce and Management**
MBA General Management
MBA Innovation and Entrepreneurship
MBA International Business
MBA Agricultural Marketing
M.Com (Accounting & Taxation with Forensic Accounting)

**Faculty of Basic & Applied Sciences**
School of Mathematical & Physical Sciences
BSc-Major (M, CS), Minor (P/ S/E)
BSc-Major (S, CS), Minor (P/M/E)
BSc-Major (P, M), Minor (CS/ S/E)

School of Applied Sciences
BSc- Major (BT), Minor (CS/BC)
BSc- Major (FST) Minor (Z/BC/CS)
BSc- Major (MB) Minor (Z/C/BC/CS)

School of Chemical & Biological Sciences
BSc-Major (P, C), Minor (CS/ M/E)
BSc-Major (C, CS), Minor (P/ M/E)
BSc-Major (B, Z), Minor (C/ EC/CS/S)
BSc-Major (C, Z), Minor (B/ EC/CS/S)
BSc -Major (C, B), Minor (BC/MB/CS/S)

**Faculty of Computing & IT**
BCA- Computer Applications (PD-BCA)
BSc- Data Science (PD-DS)
BSc- AI and Data Analytics (PD-AI &DA)
BSc- Computer Science (PD-CS)

**Faculty of Legal Studies**
BCom, LLB (5 Year-Integrated)
BBA, LLB (5 Year-Integrated)
LLB (3 Year)

GMU: E303 B.Tech CET Code | B086 MBA PGCET Code | C568 MCA PGCET Code
GMIT: E114 CET Code | B176 MBA PGCET Code

Contact
admissions@gmu.ac.in www.gmu.ac.in
9364099720, 9364099712, 6364259993

# ಕಾರ್ಮಿಕರ ಸಮಸ್ಯೆ ಪರಿಹಾರಕ್ಕೆ ಪ್ರಯತ್ನ

## ಹರಿಹರ ನಗರಸಭೆ ಪೌರ ಕಾರ್ಮಿಕರ ದಿನಾಚರಣೆ ಸಮಾರಂಭದಲ್ಲಿ ಶಾಸಕ ಬಿ.ಪಿ ಹರೀಶ್




ಹರಿಹರ, ಸೆ.23- ನಗರಸಭೆಯಲ್ಲಿ ಪೌರ ಕಾರ್ಮಿಕರ ಕೊರತೆ ಇದ್ದು, ಪೌರ ಕಾರ್ಮಿಕರ ಹಲವಾರು ಸಮಸ್ಯೆಗಳೂ ಇವೆ. ಅವುಗಳನ್ನು ಸರ್ಕಾರದ ಗಮನಕ್ಕೆ ತರುವ ಮೂಲಕ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಶಾಸಕ ಬಿ.ಪಿ. ಹರೀಶ್ ಭರವಸೆ ನೀಡಿದರು.

ನಗರದ ಗುರುಭವನದ ಸಭಾಂಗಣದಲ್ಲಿ ಇಂದು ನಡೆದ ಪೌರ ಕಾರ್ಮಿಕರ ದಿನಾಚರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನಗರದ ಸ್ವಚ್ಚತೆ ಸೇರಿದಂತೆ, ಸಾರ್ವಜನಿಕರಿಗೆ ಅತಿ ಉಪಯುಕ್ತವಾಗುವಂತಹ ಅನೇಕ ಕೆಲಸ, ಕಾರ್ಯಗಳನ್ನು ಪೌರ ಕಾರ್ಮಿಕರು ಮಾಡುತ್ತಾರೆ. ಊರಿನಲ್ಲಿ ಯಾವುದೇ ಹಬ್ಬ ಇದ್ದರೂ ಆ ಸಮಯದಲ್ಲಿ ತಾವುಗಳು ಮಾತ್ರ ಕುಟುಂಬದ ಸದಸ್ಯರ ಜೊತೆಗೆ ಹಬ್ಬ ಆಚರಿಸದೇ, ಸಾರ್ವಜನಿಕರ ಸೇವಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಪೌರ ಕಾರ್ಮಿಕರ ಕಾರ್ಯ ಶ್ಲಾಘನೀಯವಾದುದು ಎಂದರು.

ನಗರಸಭೆ ಅಧ್ಯಕ್ಷರಾದ ಕವಿತಾ ಮಾರುತಿ ಬೇಡರ್ ಮಾತನಾಡಿ, ಸರ್ಕಾರವು ಪೌರ ಕಾರ್ಮಿಕರ ಏಳಿಗೆಗಾಗಿ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿರುತ್ತದೆ. ಅವುಗಳನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ನಗರಸಭೆ ಉಪಾಧ್ಯಕ್ಷ ಜಂಬಣ್ಣ ಗುತ್ತೂರು ಮಾತನಾಡಿ, ಪೌರ ಕಾರ್ಮಿಕರು ನಗರದ ಜನತೆಯನ್ನು ರಕ್ಷಣೆ ಮಾಡುವಂತೆ ಜವಾಬ್ದಾರಿ ಸ್ಥಾನವನ್ನು ಹೊಂದಿರುವ ಮರಿ ಸೈನ್ಯ ಇದ್ದಂತೆ, ಸಾರ್ವಜನಿಕರು ಸಹ ಎಲ್ಲೆಂದರಲ್ಲಿ ಕಸವನ್ನು ಹಾಕುವಾಗ ಅದನ್ನು ತಡೆಯುವಂತಹ ಹಕ್ಕು ಇರುತ್ತದೆ ಎಂದು ಹೇಳಿದರು.

ಸದಸ್ಯ ಹನುಮಂತಪ್ಪ ಮಾತನಾಡಿ, ಪೌರ ಕಾರ್ಮಿಕರಿಗೆ ನಿವೇಶನ ಕೊಡಿಸಲು ಶಾಸಕರು ಮುಂದಾಗಬೇಕಿದೆ ಎಂದು ಒತ್ತಾಯಿಸಿದರು.

ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮಾತನಾಡಿ, ಪೌರ ಕಾರ್ಮಿಕರ ಹಿತದೃಷ್ಟಿಯಿಂದ, ಆದಷ್ಟು ಬೇಗ ವಿಶ್ರಾಂತಿ ಕೊಠಡಿಯ ಉದ್ಘಾಟನೆ ಮಾಡಲಾಗುತ್ತದೆ ಮತ್ತು ಸುರಕ್ಷಿತ ಪರಿಕರಗಳನ್ನು ನೀಡಲಾಗುತ್ತದೆ. ಅವುಗಳನ್ನು ಕಡ್ಡಾಯವಾಗಿ ಬಳಸಬೇಕು. ಜೊತೆಗೆ ವಿಶೇಷ ಭತ್ಯೆ 7 ಸಾವಿರ ರೂ.ಗಳ ಚೆಕ್ ನೀಡಲಾಗುತ್ತಿದ್ದು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. 4 ಎಕರೆ ಜಮೀನು ಮಾಲೀಕರು ನ್ಯಾಯಾಲಯದ ಮೊರೆ ಹೋಗಿದ್ದು, ಪ್ರಕರಣ ಇತ್ಯರ್ಥ ಆದ ನಂತರ ನಿವೇಶನ ವಿಚಾರ ಮಾಡಲಾಗುತ್ತದೆ ಎಂದು ಹೇಳಿದರು.

ಆರೋಗ್ಯ ಇಲಾಖೆಯ ಅಧಿಕಾರಿಗಳಾದ ರವಿಪ್ರಕಾಶ್, ಸಂತೋಷ ನಾಯ್ಕ್, ಪೌರ ಕಾರ್ಮಿಕರ ಸಂಘದ ಗೌರವ ಅಧ್ಯಕ್ಷ ಸದಾಶಿವ, ಅಧ್ಯಕ್ಷ ಹುಚ್ಚೆಂಗಪ್ಪ, ಪ್ರಧಾನ ಕಾರ್ಯದರ್ಶಿ ಹೆಚ್. ಪರಸಪ್ಪ, ಖಜಾಂಚಿ ರವಿಕುಮಾರ್, ಉಪಾಧ್ಯಕ್ಷ ಡಿ.ಹನುಮಂತಪ್ಪ, ಜಂಟಿ ಕಾರ್ಯದರ್ಶಿ ದಯಾನಂದ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಾಗರತ್ನ ಪ್ರಾರ್ಥಿಸಿದರು. ಮ್ಯಾನೇಜರ್ ನಿರಂಜನಿ ಪ್ರಾಸ್ತಾವಿಕ ಮಾತನಾಡಿದರು. ಜಿ. ಕೆ.ಪ್ರವೀಣ್ ಸ್ವಾಗತಿಸಿದರು. ಮುಖ್ಯ ಶಿಕ್ಷಕ ಬಿ.ಬಿ ರೇವಣನಾಯ್ಕ್ ಕಾರ್ಯಕ್ರಮ ನಿರೂಪಿಸಿದರು.

# 5 ಎಕರೆ ಜಾಗದಲ್ಲಿ ಪೌರ ಕಾರ್ಮಿಕರ ಮನೆಗಳ ನಿರ್ಮಾಣ : ಶಾಸಕರಾದ ಲತಾ ಮಲ್ಲಿಕಾರ್ಜುನ್



ಹರಪನಹಳ್ಳಿ, ಸೆ. 23- ಪುರಸಭೆ ಪೌರ ಕಾರ್ಮಿಕರಿಗೆ ಮನೆ ನಿರ್ಮಿಸಿಕೊಡಲು ಪಟ್ಟಣದಲ್ಲಿ ಐದು ಎಕರೆ ಜಾಗ ಗುರುತಿಸಲಾಗಿದೆ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಹೇಳಿದರು.

ಪಟ್ಟಣದ ಪುರಸಭಾ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪೌರಕಾರ್ಮಿಕರಿಗೆ ಸೂರು ಕಲ್ಪಿಸಲು ಈಗಾಗಲೇ ಪಟ್ಟಣದಲ್ಲಿ 5 ಎಕರೆ ಜಮೀನು ಕಾಯ್ದಿರಿಸಲಾಗಿದ್ದು, ಆದಷ್ಟು ಬೇಗ ಮನೆ ನಿರ್ಮಿಸಿ ಕೊಡಲಾಗುವುದು ಎಂದು ತಿಳಿಸಿದರು.

ನಗರ ಸ್ವಚ್ಛಗೊಳಿಸುವಾಗ ಪೌರಕಾರ್ಮಿಕರು ಮಾಸ್ಕ್, ಗ್ಲೌಸ್, ಜಾಕೇಟ್ ಉಪಯೋಗಿಸಿಕೊಂಡು ತಮ್ಮಗಳ ಆರೋಗ್ಯ ಕಾಪಾಡಿಕೊಳ್ಳಬೇಕು, ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿನ ಉತ್ತಮ ನಾಗರಿಕರನ್ನಾಗಿ ಮಾಡಬೇಕೆಂದು ಸಲಹೆ ನೀಡಿದರು.

ಪುರಸಭಾ ಹಿರಿಯ ಸದಸ್ಯ ಎಂ.ವಿ.ಅಂಜಿನಪ್ಪ ಮಾತನಾಡಿ, ಪೌರಕಾರ್ಮಿಕರು ದೇಶ ಕಾಯುವ ಸೈನಿಕರಿದ್ದಂತೆ. ಯೋಧರು ಗಡಿ ಕಾಪಾಡಿದರೆ, ಪೌರ ಕಾರ್ಮಿಕರು ಜನರ ಆರೋಗ್ಯ ಕಾಪಾಡುವರು, ಪೌರ ಕಾರ್ಮಿಕರ ವೃತ್ತಿ ವಂಶಪಾರಂಪರ್ಯವಾಗಬಾರದು, ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಿ, ಉನ್ನತ ಹುದ್ದೆಗಳಿಗೆ ಹೋಗವಂತೆ ಮಾಡಿ ಎಂದು ಹೇಳಿದರು.

ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ ಮಾತನಾಡಿ, ಪೌರ ಕಾರ್ಮಿಕರಿಗೆ ನಿವೇಶನ ಒದಗಿಸಬೇಕು, ಕ್ಲೀನರ್, ಚಾಲಕರನ್ನು ಪೌರ ಕಾರ್ಮಿಕರೆಂದು ಪರಿಗಣಿಸಬೇಕು, ಜ್ಯೋತಿ ಸಂಜೀವಿನಿ ಯೋಜನೆಯಡಿ ಸೇರಿಸುವುದು ಸೇರಿದಂತೆ ಇತರೆ ಬೇಡಿಕೆಗಳನ್ನು ಪೌರ ಕಾರ್ಮಿಕರ ಪರವಾಗಿ ಶಾಸಕರಿಗೆ ಬೇಡಿಕೆ ಈಡೇರಿಸುವಂತೆ ಮನವಿ ಮಾಡಿದರು.

**ಹರಪನಹಳ್ಳಿ**

ಸದಸ್ಯ ಅಬ್ದುಲ್ ರೆಹಮಾನ್ ಮಾತನಾಡಿ, ಪೌರ ಕಾರ್ಮಿಕರು ವೈದ್ಯರಿದ್ದಂತೆ. ಬೆಳಗಿನ ಜಾವ ನಗರವನ್ನು ಸ್ವಚ್ಛ ಮಾಡಿ ಜನತೆಯ ಆರೋಗ್ಯ ಕಾಪಾಡುತ್ತಾರೆ, ಇಂತವರಿಗೆ ಇನ್ನು ಹೆಚ್ಚಿನ ಸೌಲಭ್ಯ ಸಿಗಬೇಕು ಎಂದು ಹೇಳಿದರು.

ಸದಸ್ಯ ಎಸ್.ಜಾಕೀರ್ ಹುಸೇನ್ ಮಾತನಾಡಿ, ಕೊರೋನಾ ಸಮಯದಲ್ಲಿ ಜೀವದ ಹಂಗು ತೊರೆದು ಪೌರ ಕಾರ್ಮಿಕರು ಸೈನಿಕರಂತೆ ಕೆಲಸ ಮಾಡಿದ್ದಾರೆ.ಸರ್ಕಾರ ಅವರಿಗೆ ಹೆಚ್ಚಿನ ಸೌಲಭ್ಯ ನೀಡಬೇಕು, ಪೌರಕಾರ್ಮಿಕರು ದುಶ್ಚಟಕ್ಕೆ ಬಲಿಯಾ ಗದೆ ಉತ್ತಮ ಜೀವನ ಕಟ್ಟಿಕೊಳ್ಳಬೇಕು ಎಂದು ಹೇಳಿದರು. ಪುರಸಭಾ ವ್ಯವಸ್ಥಾಪಕ ಅಶೋಕ ಮಾತನಾಡಿದರು. ಸಿಆರ್‌ಪಿ ಎಚ್.ಸಲೀಂ ಸ್ವಾಗತಿಸಿ, ನಿರೂಪಿಸಿದರು.

ಪುರಸಭಾ ಸದಸ್ಯರಾದ ಲಾಟಿ ದಾದಾಪೀರ್, ಭರತೇಶ, ಮಂಜುನಾಥ ಇಜಂತಕರ್, ಕೊಟ್ರೇಶ, ಕಿರಣ್ ಶಾನಬಾಗ್, ವಿನಯ ಗೌಳಿ, ಹನುಮವ್ವ, ಶೋಭಾ, ಎಂ.ಕೆ.ಜಾವೀದ್, ಶೆಕ್ಷಾವಲಿ, ವಾಗೀಶ, ಹನುಮಂತಪ್ಪ, ಚಿಕ್ಕೇರಿ ಬಸಪ್ಪ, ಮಲ್ಲೆಪ್ಪ, ಮತ್ತೂರು ಬಸವರಾಜ, ಯುವ ಮುಖಂಡ ಸೈಯದ್ ಇರ್ಫಾನ್ ಸೇರಿದಂತೆ ಇತರರು ಇದ್ದರು.

## ದಾಸಕರಿಯಪ್ಪ ನಿಧನಕ್ಕೆ ಹರಪನಹಳ್ಳಿ ನಾಯಕ ಸಮಾಜದ ಸಂತಾಪ



ಹರಪನಹಳ್ಳಿ, ಸೆ. 23 - ದಾವಣಗೆರೆಯ ನಾಯಕ ಸಮಾಜದ ಹಿರಿಯರು, ಜೆಡಿಎಸ್ ಮಾಜಿ ಜಿಲ್ಲಾ ಅಧ್ಯಕ್ಷರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಟಿ. ದಾಸಕರಿಯಪ್ಪ ನಿಧನಕ್ಕೆ ಹರಪನಹಳ್ಳಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ ಸಂತಾಪ ವ್ಯಕ್ತಪಡಿಸಿದೆ. ಸಮಾಜದ ಅಧ್ಯಕ್ಷ ಅರಸಿಕೆರೆ ವೈ.ಡಿ. ಅಣ್ಣಪ್ಪ, ಮಾಜಿ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ಶಿರಹಟ್ಟಿ ದಂಡೆಪ್ಪ, ಹಲವಾಗಲು ಹೆಚ್.ಟಿ.ಗಿರೀಶಪ್ಪ, ನಿಚ್ಚವನಹಳ್ಳಿ ಕೆ. ಪರಶುರಾಮಪ್ಪ, ವಾಲ್ಮೀಕಿ ನಾಯಕ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಹೆಚ್.ಟಿ. ವನಜಾಕ್ಷಮ್ಮ ಮಾಜಿ ಅಧ್ಯಕ್ಷೆ ಕಂಚಿಕರೆ ಜಯಲಕ್ಷ್ಮಿ, ಮಹಿಳಾ ಮುಖಂಡ ಟಿ. ಪದ್ಮಾವತಿ, ಗುಂಡಗತ್ತಿ ನೇತ್ರಾವತಿ, ಮಂಜುಳಾ, ಮುಖಂಡರುಗಳಾದ ಕೋಡಿಹಳ್ಳಿ ಭೀಮಪ್ಪ, ಬಸವರಾಜ ಸಂಗಪ್ಪನವರ್, ಲಿಂಗರಾಜ ಪಣಿಯಾಪುರ, ಬಾಲೇನಹಳ್ಳಿ ಕೆಂಚನಗೌಡ್ರು, ಬಾಣದ ಅಂಜಿನಪ್ಪ, ತೆಲಿಗಿ ಉಮಾಕಾಂತ, ಜಿಟ್ಟಿನಕಟ್ಟಿ ಹೆಚ್.ಕೆ.ಮಂಜುನಾಥ, ಬಾಗಳಿ ಆನಂದಪ್ಪ, ತೆಲಿಗಿ ಅಂಜಿನಪ್ಪ, ಶಿವಪ್ಪ, ಮಂಡಕ್ಕಿ ಸುರೇಶ ಸೇರಿದಂತೆ ಇತರರು ಸಂತಾಪ ಸೂಚಿಸಿದ್ದಾರೆ.



## ರಾಣೇಬೆನ್ನೂರು ದೇವಾಂಗ ಸಂಘದ ಅಧ್ಯಕ್ಷರಾಗಿ ಬಸವರಾಜ ಲಕ್ಮೇಶ್ವರ

ರಾಣೇಬೆನ್ನೂರು, ಸೆ. 23 - ಇಲ್ಲಿನ ದೊಡ್ಡಪೇಟೆ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿಂದು ನಡೆದ ರಾಣೇಬೆನ್ನೂರು ತಾಲ್ಲೂಕು ದೇವಾಂಗ ಸಂಘದ ಸಭೆಯಲ್ಲಿ ಪದಾಧಿಕಾರಿಗಳ ಅವಿರೋಧ ಆಯ್ಕೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕರಿಬಸಪ್ಪ ನೀಲಗುಂದ ವಹಿಸಿದ್ದರು.

ಬಸವರಾಜ ಲಕ್ಮೇಶ್ವರ ಅಧ್ಯಕ್ಷರು, ಗುಡದಯ್ಯ ನೀಲಗುಂದ ಉಪಾಧ್ಯಕ್ಷರು, ಗಿರಿಧರ ಗುಳೇದಗುಡ್ಡ ಪ್ರಧಾನ ಕಾರ್ಯದರ್ಶಿ, ಮನೋಹರ ಲಕ್ಮೇಶ್ವರ ಕೋಶಾಧ್ಯಕ್ಷರು. ಸಭೆಯಲ್ಲಿ ನೇಕಾರ ಒಕ್ಕೂಟದ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ, ಜಿಲ್ಲಾ ಸಂಘದ ಮಾಜಿ ಅಧ್ಯಕ್ಷ ಸಂಕಪ್ಪ ಮಾರನಾಳ, ಗಣೇಶ ಸಿರಗೂರ, ಗಾಯತ್ರಿ ಸಹಕಾರಿ ಸಂಘದ ಅಧ್ಯಕ್ಷ ನಾಗರಾಜ ಲಕ್ಮೇಶ್ವರ, ರಮೇಶ ದುರ್ಗದ ಸೀಮಿ, ಗಣೇಶ ಹಾವನೂರ, ಚಂದ್ರಪ್ಪ ಉದಗಟ್ಟಿ, ಮಹಿಳಾ ಸಂಘದ ಪ್ರತಿನಿಧಿಗಳಾದ ಶಾರದಾ, ಆನ್ವೇರಿ, ಸುಮಾ ಹಳ್ಳಿಯವರ ಮತ್ತಿತರರಿದ್ದರು.

## ಮದ್ಯ ಸೇವಿಸಿ ವಾಹನ ಚಲಾಯಿಸಿದರೆ ಪರವಾನಗಿ ರದ್ದು : ಸಿಎಂ ಕಟ್ಟೆಚ್ಚರ

ಬೆಂಗಳೂರು, ಸೆ. 23 - ಸಂಚಾರಿ ನಿಯಮ ಪಾಲಿಸದವರ ಹಾಗೂ ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ಚಾಲನಾ ಪರವಾನಗಿ ರದ್ದು ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟೆಚ್ಚರಿಕೆ ನೀಡಿದ್ದಾರೆ.

ಮೊಬೈಲ್‌ನಲ್ಲಿ ಮಾತನಾಡುತ್ತಾ ವಾಹನ ಚಲಾಯಿಸಿದರೆ ಅಪಘಾತಗಳಾಗದೆ ಇರುತ್ತದೆಯೇ? ನಿಮ್ಮ ಜೀವಕ್ಕೆ ನೀವೇ ಜವಾಬ್ದಾರಿ, ನಿಮ್ಮ ಕುಟುಂಬಕ್ಕೆ ನೀವೇ ಜವಾಬ್ದಾರಿ. ಆದ್ದರಿಂದ ಸಂಚಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಎಂದರು.

ಸಂಚಾರಿ ನಿಯಮಗಳನ್ನು ಶಿಸ್ತಿನಿಂದ ಪಾಲಿಸಿದರೆ ಬಹುತೇಕ ಅಪಘಾತಗಳು ಸಂಭವಿಸುವುದಿಲ್ಲ. ಮದ್ಯಪಾನ ಮಾಡಿ ವಾಹನ ಓಡಿಸುವುದನ್ನು ನಿಲ್ಲಿಸಿ, ನಿಮ್ಮ ಕುಟುಂಬಗಳನ್ನು ಅನಾಥ ಮಾಡಬೇಡಿ ಎಂದು ಜನತೆಗೆ ಮುಖ್ಯಮಂತ್ರಿ ಕರೆ ನೀಡಿದರು.

ವೇದಿಕೆಯಲ್ಲೇ ಇದ್ದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರ ಕಡೆಗೆ ತಿರುಗಿ, ಸಂಚಾರಿ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಿ ಎಂದು ಸೂಚಿಸಿದರು.

ಆಧುನಿಕ ಜೀವ ರಕ್ಷಕ ಸವಲತ್ತುಗಳ 65 ಆಂಬ್ಯುಲೆನ್ಸ್‌ಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಅಪಘಾತ ಸಂದರ್ಭದಲ್ಲಿ ಗೋಲ್ಡರ್ ಅವರ್ ಬಹಳ ಮುಖ್ಯ.

ಈ ಒಂದು ಗಂಟೆಯಲ್ಲಿ ಅಗತ್ಯ ತುರ್ತು ಚಿಕಿತ್ಸೆ ದೊರೆತರೆ ನೂರಾರು ಪ್ರಾಣಗಳನ್ನು ಉಳಿಸಲು ಸಾಧ್ಯವಿದೆ. ಪ್ರಾಣ ಉಳಿಸುವ ಕಾರ್ಯಕ್ಕೆ ಆಂಬ್ಯುಲೆನ್ಸ್‌ಗಳು ನೆರವಾಗುತ್ತವೆ ಎಂದರು.

ಪ್ರಸ್ತುತ 65 ಆಧುನಿಕ ಮತ್ತು ಪ್ರಾಥಮಿಕ ಸೌಲಭ್ಯಗಳ ಆಂಬ್ಯುಲೆನ್ಸ್‌ಗಳನ್ನು ಲೋಕಾರ್ಪಣೆ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಇಡೀ ರಾಜ್ಯಕ್ಕೆ ಆಧುನಿಕ ಸವಲತ್ತುಗಳ ಆಂಬ್ಯುಲೆನ್ಸ್‌ಗಳನ್ನು ವಿಸ್ತರಿಸಲಾಗುವುದು ಎಂದರು.

## ನಗರದಲ್ಲಿ ಇಂದು ಶ್ರೀ ಗೌರಚಂದ್ರ ಮಾರಮ್ಮ ದೇವಿ ಜಾತ್ರಾ ಮಹೋತ್ಸವ



ಬೂದಾಳ್ ರಸ್ತೆ ಬಾಬು ಜಗಜೀವನ್ ರಾಂ ನಗರದಲ್ಲಿರುವ ಶ್ರೀ ಗೌರಚಂದ್ರ ಮಾರಮ್ಮ ದೇವಿ ಜಾತ್ರೆಯು ಇಂದು ನಡೆಯಲಿದ್ದು, ಇಂದು ಬ್ರಾಹ್ಮೀ ಮುಹೂರ್ತದಲ್ಲಿ ಹರಿಹರದ ತುಂಗಭದ್ರಾ ನದಿಯಲ್ಲಿ ಹೊಳೆ ಪೂಜೆ, ಶ್ರೀದೇವಿಗೆ ಅಭಿಷೇಕ ಜರುಗಲಿದೆ.

ಪಿ.ಬಿ. ರಸ್ತೆಯ ಅರುಣಾ ಸರ್ಕಲ್ ಬಳಿ ಇರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಿಂದ ಬೂದಾಳ್ ರಸ್ತೆಯ ಶ್ರೀ ಮಾರಮ್ಮ ದೇವಿ ದೇವಸ್ಥಾನದವರೆಗೆ ಶ್ರೀದೇವಿಯ ಮೆರವಣಿಗೆ ನಡೆಯಲಿದ್ದು, ಸಂಜೆ 7 ರಿಂದ 9 ರವರೆಗೆ ಮಹಾಮಂಗಳಾರತಿ ಪೂಜೆ ಏರ್ಪಾಡಾಗಿದೆ.

## ಮಾರಾಟ ಮಳಿಗೆಗಳ ಉದ್ಘಾಟನೆ

ದಾವಣಗೆರೆ, ಸೆ. 23 - ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಮಹಿಳೆಯರ ದಿನ ನಿತ್ಯ ಬಳಸುವ ವಸ್ತುಗಳ ಮಾರಾಟ ಮಳಿಗೆಗಳ ಉದ್ಘಾಟನೆಯನ್ನು ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರು ಉದ್ಘಾಟಿಸಿದರು.



## ವಿನಯ್ ಸಂತಾಪ

ದಾವಣಗೆರೆ, ಸೆ.23- ಜೆಡಿಎಸ್ ಜಿಲ್ಲಾ ಮಾಜಿ ಅಧ್ಯಕ್ಷ, ಕುಸ್ತಿಪಟು, ವಾಲ್ಮೀಕಿ ಸಮಾಜದ ನಾಯಕರಾದ ಟಿ. ದಾಸಕರಿಯಪ್ಪ ನಿಧನಕ್ಕೆ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ಅವರು ಸಂತಾಪ ಸೂಚಿಸಿದ್ದಾರೆ. ಮೃತದೇಹದ ಅಂತಿಮ ದರ್ಶನ ಪಡೆದ ವಿನಯ್ ಕುಮಾರ್ ಅವರು ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

### ಶ್ರೀಮತಿ ಜಿ.ಎಂ. ಪುಷ್ಪಾಲತಾ ನಿಧನ



ದಾವಣಗೆರೆ ಸಿಟಿ ಯರಗುಂಟೆಯ ಶ್ರೀ ಗುರು ಕರಿಬಸವೇಶ್ವರ ಗದ್ದಿಗೆ ಮಠ, ಶ್ರೀ ಕ್ಷೇತ್ರದ ಶ್ರೀ ಪರಮಪೂಜ್ಯ ಪರಮೇಶ್ವರ ಸ್ವಾಮಿಗಳವರ ಪತ್ನಿ ಶ್ರೀಮತಿ ಜಿ.ಎಂ. ಪುಷ್ಪಾಲತಾ ಅವರು ದಿನಾಂಕ 23.9.2024ರ ಸೋಮವಾರ ಸಂಜೆ 6.55ಕ್ಕೆ ಲಿಂಗೈಕ್ಯರಾದರು. ಅವರಿಗೆ 47 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಗ, ಬಂಧು-ಬಳಗ ಹಾಗೂ ಶ್ರೀ ಮಠದ ಅಪಾರ ಭಕ್ತರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.9.2024ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರುವುದು.

# ಹರಿಹರದಲ್ಲಿ ವಿಜೃಂಭಣೆಯ ಗಣೇಶ ವಿಸರ್ಜನೆ

ಹರಿಹರ,ಸೆ.23- ನಗರದ ಗಾಂಧಿ ಮೈದಾನದಲ್ಲಿ ಸಾರ್ವಜನಿಕ ವಿನಾಯಕ ಮಹೋತ್ಸವ ಸಮಿತಿಯ ವತಿಯಿಂದ ಪ್ರತಿಷ್ಠಾಪನೆ ಮಾಡಿರುವ ಗಣೇಶ ಮೂರ್ತಿಯನ್ನು ಶ್ರದ್ಧಾ - ಭಕ್ತಿ, ಸಡಗರ - ಸಂಭ್ರಮದಿಂದ ವಿಸರ್ಜನೆ ಮಾಡಲಾಯಿತು.

ಚಿದಂಬರ ಜೋಯಿಸರು ಮತ್ತು ಲಕ್ಷ್ಮೀಕಾಂತ ಜೋಯಿಸರ ನೇತೃತ್ವದಲ್ಲಿ ಗಣಪತಿಗೆ ವಿಶೇಷ ಪೂಜೆ, ಅಲಂಕಾರ, ಮಹಾಮಂಗಳಾರತಿ ಮುಂತಾದ ಪೂಜಾ ಕಾರ್ಯಗಳನ್ನು ನೆರವೇರಿಸಿದರು. ಸಾರ್ವಜನಿಕ ವಿನಾಯಕ ಮಹೋತ್ಸವ ಸಮಿತಿ ಗೌರವ ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ಗಣಪತಿ ವಿಸರ್ಜನೆ ಟ್ರ್ಯಾಕ್ಟರ್ ಓಡಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಸಮಾಳ, ಡ್ರಮ್ ಸೆಟ್ ವಾದನ, ಹಲಗೆ, ಡಿಜೆ ಸೌಂಡ್ ಸಿಸ್ಟಮ್ ಸೇರಿದಂತೆ ವಿವಿಧ ಕಲಾ ಮೇಳಗಳು, ಎಲ್ಲರ ಕೊರಳಿನಲ್ಲಿ ಕೇಸರಿ ಬಣ್ಣದ ಶಾಲುಗಳು ಮೆರವಣಿಗೆಯಲ್ಲಿ ಮೆರಗನ್ನು ತಂದವು. ಯುವಕರು, ಹಿರಿಯರು ಡಿ.ಜೆ.ಸೌಂಡ್ ತಾಳಕ್ಕೆ ಹೆಜ್ಜೆಗಳನ್ನು ಹಾಕಿ ಕುಣಿದು



ಕುಪ್ಪಳಿಸಿದರು.

ಮೆರವಣಿಗೆ ಗಾಂಧಿ ವೃತ್ತದ ಮೂಲಕ ಹಾದು ಮುಖ್ಯ ರಸ್ತೆಯ ಊರಮ್ಮ ದೇವಿ ದೇವಸ್ಥಾನ ಮುಂಭಾಗಕ್ಕೆ ಬರುತ್ತಿದ್ದಂತೆ ವರುಣನ ಆಗಮನದಿಂದ ಕೆಲ ಕಾಲ ಮೆರವಣಿಗೆಯನ್ನು ಸ್ಥಗಿತಗೊಳಿಸಿ ತದನಂತರ ಮಳೆ ನಿಂತ ಮೇಲೆ ಮೆರವಣಿಗೆ ಆರಂಭಿಸಲಾಯಿತು.

ರಾಣಿ ಚೆನ್ನಮ್ಮ ವೃತ್ತ, ದೇವಸ್ಥಾನ ರಸ್ತೆ, ಶಿಬಾರ ವೃತ್ತ, ಟಿ.ಬಿ. ರಸ್ತೆಯಲ್ಲಿ ಸಂಚರಿಸಿ, ನಗರಸಭೆ ನಿಗಪಡಿಸಿರುವ ಸ್ಥಳದಲ್ಲಿ ಗಣಪತಿ ವಿಸರ್ಜನೆ ಮಾಡಲಾಯಿತು.

ಸಾರ್ವಜನಿಕ ವಿನಾಯಕ ಮಹೋತ್ಸವ ಸಮಿತಿ ಅಧ್ಯಕ್ಷ ಕೆ. ಜೆ.ಸಿದ್ದೇಶ್, ಪ್ರಧಾನ ಕಾರ್ಯದರ್ಶಿ ಸಂತೋಷ ನೋಟದರ್, ಖಜಾಂಚಿ ಮಂಜುನಾಥ್, ಕಾರ್ಯದರ್ಶಿ ಎಂ.ಚಿದಾನಂದ ಕಂಚಿಕೇರಿ, ಕಾಂಗ್ರೆಸ್ ಮುಖಂಡ ನಿಖಿಲ್ ಕೊಂಡಜ್ಜಿ, ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ಪಿ.ಎನ್. ವಿರುಪಾಕ್ಷಪ್ಪ, ತಾಪಂ ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ರೇವಣಸಿದ್ದಪ್ಪ ಅಮರಾವತಿ, ದಾದಾಪೀರ್ ಭಾನುವಳ್ಳಿ, ರಮೇಶ್ ಗಿರಣಿ, ನಾಮನಿರ್ದೇಶನ ಸದಸ್ಯ ಕೆ.ಬಿ. ರಾಜಶೇಖರ್, ಅರುಣ್ ಕುಮಾರ್ ಬೊಂಗಾಳೆ, ಕೆ.ರವಿಚಂದ್ರ, ಮಲ್ಲೇಶ್ ಕಮಲಾಪುರ, ಶಿಕ್ಷಕ ಬೀರೇಶ್, ತಿಪ್ಪೇಸ್ವಾಮಿ, ಆನಂದ್, ಹೆಚ್ ಶಿವಪ್ಪ, ಸಮಾಳ ಚಂದ್ರಪ್ಪ, ವೈ ರಘುಪತಿ, ಶಿವಕುಮಾರ್ ಮಲೇಬೆನ್ನೂರು, ಜಿಗಳಿ ಪ್ರಕಾಶ್, ವೆಂಕಟೇಶ್, ರಟ್ಟಿಹಳ್ಳಿ ವಿಜಯಕುಮಾರ್, ನಾರಾಯಣ್, ಸಂತೋಷ್, ನರೇಂದ್ರ ಕುಮಾರ್ ನಂದಿಗಾವಿ, ಗೋವಿನಾಳ ರಾಜಣ್ಣ, ಆರ್. ಶ್ರೀನಿವಾಸ್, ಕೆ.ಬಿ. ಶಿವಪ್ರಕಾಶ್ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಸಿಪಿಐಗಳಾದ ಸುರೇಶ್ ಸಗರಗಿ, ಎಸ್. ದೇವಾನಂದ್, ಪಿಎಸ್ಐಗಳಾದ ವಿಜಯಕುಮಾರ್, ಶ್ರೀಪತಿ ಗನ್ನಿ, ಮಂಜುನಾಥ್ ಕುಪ್ಪೇಲೂರು ಗುತ್ತೂರು, ಪ್ರಭು ಕೆಳಗಿನಮನೆ ಮಲೇಬೆನ್ನೂರು , ಎಎಸ್ಐ ಮನಸೂರು, ರಾಜಶೇಖರ್, ಡಿ.ಟಿ ಶ್ರೀನಿವಾಸ್, ಸಿಬ್ಬಂದಿಗಳಾದ ರವಿಕುಮಾರ್, ನಿಂಗರಾಜ್, ರಿಜ್ವಾನ್, ನಾಯ್ಕ್, ಸಿದ್ದೇಶ್, ತಿಪ್ಪೇಸ್ವಾಮಿ, ಹನುಮಂತಪ್ಪ, ಸುಜಾತ, ಕವಿತಾ, ದೇವರಾಜ್, ನಾಗರಾಜ್ ಇತರರು ಸೂಕ್ತ ಬಂದೋಬಸ್ತ್ ಏರ್ಪಾಡು ಮಾಡಿದ್ದರು.

## ದುರ್ಗಾ ಪೂಜೆ ಸಮಿತಿಗೆ 85 ಸಾವಿರ ಕಡಿಮೆ, 10 ಲಕ್ಷ ರೂ. ಕೊಡಿ

### ಮಮತಾ ಬ್ಯಾನರ್ಜಿ ಸರ್ಕಾರಕ್ಕೆ ಕಲ್ಕತ್ತಾ ಹೈಕೋರ್ಟ್ ವ್ಯಂಗ್ಯ

ಕೊಲ್ಕೊತಾ, ಸೆ. 23 - ಪ್ರತಿ ದುರ್ಗಾ ಪೂಜಾ ಸಮಿತಿಗಳಿಗೆ 85 ಸಾವಿರ ರೂ. ಕೊಡುತ್ತಿರುವುದು ತೀರಾ ಕಡಿಮೆಯಾಯಿತು. ಸಮಿತಿಗಳಿಗೆ 10 ಲಕ್ಷ ರೂ.ಗಳನ್ನಾದರೂ ಕೊಡಲು ಪಶ್ಚಿಮ ಬಂಗಾಳ ಸರ್ಕಾರ ಪರಿಶೀಲಿಸಬೇಕು ಎಂದು ಕಲ್ಕತ್ತಾ ಹೈಕೋರ್ಟ್ ವ್ಯಂಗ್ಯವಾಡಿದೆ.

ಪ್ರತಿ ದುರ್ಗಾ ಪೂಜಾ ಆಯೋಜಕರಿಗೆ 75 ಸಾವಿರ ರೂ. ನೀಡಲಾಗುವುದು ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು 2023ರಲ್ಲಿ ಘೋಷಿಸಿದ್ದರು. ಈ ವರ್ಷ ಅದನ್ನು 85 ಸಾವಿರ ರೂ.ಗಳಿಗೆ ಏರಿಸಲಾಗಿದೆ.

ದುರ್ಗಾ ಪೂಜಾ ಆಯೋಜಕರಿಗೆ ಹಣ ನೀಡುವುದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಸಮಿತಿಗಳು ಹಾಗೂ ಸರ್ಕಾರೇತರ ಸಂಘಟನೆಗಳಿಗೆ ಹಣ ನೀಡಿರುವ ಕುರಿತು ಲೆಕ್ಕ ಪರಿಶೋಧನೆ ನಡೆಸಬೇಕು ಎಂದು ಅರ್ಜಿದಾರರು ಕೋರಿದ್ದರು. ಈ ಬಗ್ಗೆ ಪ್ರಮಾಣ ಪತ್ರ ಸಲ್ಲಿಸುವಂತೆ ಹೈಕೋರ್ಟ್ ತಿಳಿಸಿದೆ.

ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಟಿ. ಎಸ್. ಶಿವಜ್ಞಾನಂ, 85 ಸಾವಿರ ರೂ. ಕೊಡುತ್ತಿರುವುದು ತೀರಾ ಕಡಿಮೆಯಾಗಿದೆ. ದುರ್ಗಾ ಪೂಜೆ ಸಂಭ್ರಮಕ್ಕೆ ಮಾಡುವ ವೆಚ್ಚ ಪರಿಗಣಿಸಿದರೆ ಇದು ಸಾಲದು. ಪ್ರತಿ ಆಯೋಜಕರಿಗೆ ಕನಿಷ್ಠ 10 ಲಕ್ಷ ರೂ. ನೀಡಲು ಸರ್ಕಾರ ಪರಿಗಣಿಸಬೇಕು ಎಂದು ವ್ಯಂಗ್ಯವಾಗಿ ಹೇಳಿದ್ದಾರೆ.

ಅಂಗವೈಕಲ್ಯದಿಂದ ಬಳಲುತ್ತಿರುವವರಿಗೆ ಸರ್ಕಾರ ಕೇವಲ 1,000 ರೂ.ಗಳನ್ನು ನೀಡುತ್ತಿದೆ. ಗುತ್ತಿಗೆ ಕಾರ್ಮಿಕರು, ದಿನಗೂಲಿ ಕಾರ್ಮಿಕರು ಹಾಗೂ ಬದಲಿ ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಹೈಕೋರ್ಟ್‌ಗೆ ನಿಯೋಜಿಸಲಾಗಿರುವ ಪಿಡಬ್ಲ್ಯೂಡಿ ಕಾರ್ಮಿಕರಿಗೆ ಕನಿಷ್ಠ ವೇತನವನ್ನೂ ಪಾವತಿಸುತ್ತಿಲ್ಲ ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ.

## ಶ್ರೀಮತಿ ಸುನಂದಮ್ಮ ನಿಧನ



ದಾವಣಗೆರೆ ಎಂಸಿಸಿ ಎ ಬ್ಲಾಕ್ ವಾಸಿ
**ಶ್ರೀಮತಿ ಸುನಂದಮ್ಮ (80)** (ದಿ. ನಂದಿಗೌಡ ನಂದಿತಾವರೆ ಅವರ ಪತ್ನಿ)
ಇವರು ದಿನಾಂಕ 23.09.2024ರ ಸೋಮವಾರ ಮುಂಜಾನೆ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ನಾಳೆ ದಿನಾಂಕ 24.09.2024ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ಹರಿಹರ ತಾಲ್ಲೂಕು ನಂದಿತಾವರೆಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಎನ್.ಪಿ. ಸಹೋದರರು, ನಂದಿತಾವರೆ.

## ಟಿ. ದಾಸಕರಿಯಪ್ಪನವರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಸ್ನೇಹಜೀವಿ, ಆತ್ಮೀಯ ಹಿರಿಯ ಮುಖಂಡರು,
ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು,
ಜೆ.ಡಿ.ಎಸ್.ನ ಮಾಜಿ ಜಿಲ್ಲಾಧ್ಯಕ್ಷರಾಗಿದ್ದ
**ಶ್ರೀಯುತ ಟಿ. ದಾಸಕರಿಯಪ್ಪ**
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.

ತ್ಯಾವಣಗಿ ವೀರಭದ್ರಸ್ವಾಮಿ, ಬಿಜೆಪಿ ಮುಖಂಡರು
ಸಂಸ್ಥಾಪಕರು
ಎಸ್. ಆರ್. ಪಿ. ಸಮೂಹ ಸಂಸ್ಥೆಗಳು, ದಾವಣಗೆರೆ.

## 19ನೇ ವರ್ಷದ ಚಿರಸ್ಮರಣೆ



**ದಿ|| ಬೂಸನೂರು ನೀಲಕಂಠಪ್ಪನವರು**
ಶಿವೈಕ್ಯ 24.09.2005
ನೀವು ನಮ್ಮನ್ನಗಲಿ ಇಂದಿಗೆ 24.09.2024ಕ್ಕೆ
19 ವರ್ಷಗಳಾದವು.ನಿಮ್ಮ ಚಿರ ನೆನಪಿನಲ್ಲಿರುವ,
ಮಕ್ಕಳು : **ಬೂಸನೂರು ಪ್ರಕಾಶ್ ಮತ್ತು ಸಹೋದರರು, ಸಹೋದರಿಯರು ಹಾಗೂ ಆತ್ಮೀಯರು**

**ಪ್ರಕಾಶ ಟಿವಿ ಸೆಂಟರ್**
21, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರೋಡ್, ದಾವಣಗೆರೆ. ಫೋ.254565

## ಕೆಎಸ್‌ಆರ್‌ಟಿಸಿ ಚಾಲಕನ ಸಮಯ ಪ್ರಜ್ಞೆಯಿಂದ ತಪ್ಪಿದ ಭಾರೀ ಅನಾಹುತ



ಹರಿಹರ, ಸೆ.23- ಬಸ್ ಬ್ರೇಕ್ ಫೇಲ್ ಆದ ಸಂದರ್ಭದಲ್ಲಿ ಚಾಲಕನ ಸಮಯ ಪ್ರಜ್ಞೆಯಿಂದ ಭಾರೀ ಅನಾಹುತ ತಪ್ಪಿದ ಘಟನೆ ಹರಿಹರ ತಾಲ್ಲೂಕು ಗುತ್ತೂರು ಸಮೀಪ ನಡೆದಿದೆ.

ಹೊಸಪೇಟೆಯಿಂದ ಶಿವಮೊಗ್ಗಕ್ಕೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸಿನಲ್ಲಿ ಸುಮಾರು 50 ರಿಂದ 70 ಪ್ರಯಾಣಿಕರಿದ್ದರು. ಚಾಲಕ ರಹಮತ್ ಅವರ ಸಮಯ ಪ್ರಜ್ಞೆಯಿಂದ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

**ಹರಿಹರ**

ರಸ್ತೆ ಮಧ್ಯೆ ಭಾಗದಲ್ಲಿ ಟ್ರ್ಯಾಕ್ಟರ್ ಕೆಟ್ಟು ನಿಂತಿದ್ದು, ಹರಿಹರದಿಂದ ಬರುತ್ತಿದ್ದ ಬೈಕ್ ಸವಾರನ ಅಪಾಯ ತಪ್ಪಿಸಲು ಬಸ್ ಚಾಲಕ ತಕ್ಷಣ ಬ್ರೇಕ್ ಹಾಕಿದ್ದು, ಬ್ರೇಕ್ ಫೇಲ್ ಆದ ಕಾರಣ, ಚಾಲಕನ ಸಮಯ ಪ್ರಜ್ಞೆಯಿಂದಾಗಿ ಗೇರ್ ತೆಗಿಯುವ ಮೂಲಕ ಪ್ರಯಾಣಿಕರ ಪ್ರಾಣ ಉಳಿಸಿದ್ದಾರೆ. ಇದರಿಂದಾಗಿ ಡ್ರೈವರ್ ರಹಮತ್ ಡ್ರೈವಿಂಗ್ ಚತುರತೆ, ಸಮಯ ಪ್ರಜ್ಞೆಯಿಂದ ಪ್ರಾಣ ಉಳಿಸಿ ಪ್ರಯಾಣಿಕರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಸಂಪಾದಕರು : ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಸೆಪ್ಟೆಂಬರ್ 24, 2024

## ಏರಿದ ಬೆಲೆ : ಇನ್ನಷ್ಟು ಈರುಳ್ಳಿ ಮಾರಲು ಕ್ರಮ

ನವದೆಹಲಿ, ಸೆ. 23 - ಕಾಪು ದಾಸ್ತಾನಿನ ಮೂಲಕ ಸಗಟು ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದ ಈರುಳ್ಳಿ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ. ಈರುಳ್ಳಿ ಮೇಲಿನ ರಫ್ತು ನಿರ್ಬಂಧ ತೆರವುಗೊಳಿಸಿದ ನಂತರ ಚಿಲ್ಲರೆ ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಏರಿಕೆಯಾಗಿದೆ.

ಕೇಂದ್ರ ಸರ್ಕಾರ ದೆಹಲಿ ಹಾಗೂ ಪ್ರಮುಖ ನಗರಗಳಿಗೆ ಈರುಳ್ಳಿ ಬಿಡುಗಡೆ ಮಾಡುತ್ತಿದೆ. ದೇಶವ್ಯಾಪಿ (5ನೇ ಪುಟಕ್ಕೆ)

## ಚಿತ್ರದುರ್ಗ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಸಚಿವ ಸುಧಾಕರ್



ಚಿತ್ರದುರ್ಗ, ಸೆ. 23- ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಸಚಿವ ಡಿ. ಸುಧಾಕರ್, ಉಪಾಧ್ಯಕ್ಷರಾಗಿ ಮಂಜು ನಾಥ್ ಆಯ್ಕೆಯಾಗಿದ್ದಾರೆ. ನಗರದ ಡಿಸಿಸಿ ಬ್ಯಾಂಕಿನಲ್ಲಿ ಅಧ್ಯಕ್ಷ ಮತ್ತು (5ನೇ ಪುಟಕ್ಕೆ)

### ಪ್ರಧಾನಿ ಜನ ಜಾತಿ ಉನ್ನತಿ ಗ್ರಾಮ ಅಭಿಯಾನ ಯೋಜನೆ

## ಜಿಲ್ಲೆಯ 44 ಗ್ರಾಮ ಆಯ್ಕೆ : ಡಿಸಿ



ದಾವಣಗೆರೆ, ಸೆ.23- ಕೇಂದ್ರ ಬುಡಕಟ್ಟು ಮಂತ್ರಾಲಯದಿಂದ ಅಕ್ಟೋಬರ್ 2ರಂದು ಪ್ರಧಾನ ಮಂತ್ರಿ ಜನ ಜಾತಿಯ ಉನ್ನತಿ ಗ್ರಾಮ ಅಭಿಯಾನ ಯೋಜನೆ ಘೋಷಿಸಲಿದ್ದು, ಜಿಲ್ಲೆಯ 44 ಗ್ರಾಮಗಳು ಈ ಯೋಜನೆಯಡಿ ಆಯ್ಕೆಯಾಗಲಿವೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 7 ಗ್ರಾಮಗಳು, ಜಗಳೂರು ತಾಲ್ಲೂಕಿನಲ್ಲಿ 24, ನ್ಯಾಮತಿ ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ 1 ಗ್ರಾಮ, ಚನ್ನಗಿರಿ ತಾಲ್ಲೂಕಿನಲ್ಲಿ 9 ಗ್ರಾಮ ಸೇರಿದಂತೆ ಹರಿಹರ ತಾಲ್ಲೂಕಿನ 2 ಗ್ರಾಮಗಳು ಆಯ್ಕೆಯಾಗಿವೆ ಎಂದಿದ್ದಾರೆ.

ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ ಗ್ರಾಮಗಳನ್ನು ಈ ಯೋಜನೆಯಡಿ ಆಯ್ಕೆ ಮಾಡಿದ್ದು, ಪ.ಪಂ. ಜನರಿಗೆ ಉಪಯೋಗವಾಗುವ ವಿವಿಧ 17 ಇಲಾಖೆಗಳು ಹಾಗೂ 25 ಪ್ರಮುಖ ವಿಷಯ ಒಳಗೊಂಡಿರುತ್ತದೆ ಎಂದಿದ್ದಾರೆ.

ಆಯ್ಕೆಯಾದ ಗ್ರಾಮಗಳಲ್ಲಿ ಸಂಪರ್ಕ ರಸ್ತೆ ಅಭಿವೃದ್ಧಿ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುದೀಕರಣ, ಮನೆ ನಿರ್ಮಾಣ, ಆರೋಗ್ಯ ಯೋಜನೆಗಳ ಅನುಷ್ಠಾನ, ಪರಿಶಿಷ್ಟ ವರ್ಗದವರಿಗೆ ಶಿಕ್ಷಣ, ಸೋಲಾರ್ ವ್ಯವಸ್ಥೆ, ಕೃಷಿ ಮತ್ತು ತೋಟಗಾರಿಕೆ ಯೋಜನೆಗಳ ಅನುಷ್ಠಾನ ಮತ್ತು ಮೊಬೈಲ್ ಹಾಗೂ ಇಂಟರ್‌ನೆಟ್ ಸಂಪರ್ಕ ಮುಂತಾದ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತದೆ ಎಂದಿದ್ದಾರೆ.

## ಎಂ.ಬಿ. ಪಾಟೀಲ್, ಪ್ರಿಯಾಂಕ್ ಖರ್ಗೆಗೂ ವಿವರ ಕೋರಿ ರಾಜಭವನದಿಂದ ನೋಟಿಸ್

### ಕೈಗಾರಿಕಾ ಮಂಡಳಿ ಹಗರಣ, ಟ್ರಸ್ಟ್ ಜಮೀನಿನ ಬಗ್ಗೆ ವಿವರಣೆ ಸಲ್ಲಿಸಲು ಸೂಚನೆ





ಬೆಂಗಳೂರು, ಸೆ. 23 - ಸಿದ್ದರಾಮಯ್ಯ ಸಂಪುಟದ ಮಂತ್ರಿಗಳಾದ ಎಂ.ಬಿ.ಪಾಟೀಲ್, ಪ್ರಿಯಾಂಕ್ ಖರ್ಗೆ ಅವರಿಗೂ ವಿವರಣೆ ಕೋರಿ ರಾಜಭವನ ನೋಟಿಸ್ ನೀಡಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹಗರಣಕ್ಕೆ ಸಂಬಂಧಿಸಿದಂತೆ ಪೂರ್ಣ ಮಾಹಿತಿ ಹಾಗೂ ದಾಖಲೆಗಳನ್ನು ಒದಗಿಸುವಂತೆ ಸರ್ಕಾರದ ಮುಖ್ಯಕಾರ್ಯದರ್ಶಿ ಅವರಿಗೆ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಅವರು ಪತ್ರ ಬರೆದಿರುವುದು ಬೆಳಕಿಗೆ ಬಂದಿದೆ.

ಹಗರಣಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ತಿನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಆಗಸ್ಟ್ 27ರಂದು ರಾಜ್ಯಪಾಲರನ್ನು ಭೇಟಿ ಮಾಡಿ ದಾಖಲೆ ಸಮೇತ ದೂರು ನೀಡಿರುವುದಲ್ಲದೆ, ಸಚಿವದ್ವಯರ ವಿರುದ್ಧ ಕ್ರಮ ಜರುಗಿಸುವಂತೆ ಮನವಿ ಮಾಡಿದ್ದರು.

ಇದಕ್ಕೂ ಮುನ್ನ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಳ್ಳಿ ಅವರು ಸಚಿವ ಎಂ.ಬಿ.ಪಾಟೀಲ್ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿ, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಕೋರಿದ್ದರು.

ಈ ದೂರುಗಳನ್ನು ರಾಜಭವನ ಪರಿಶೀಲಿಸಿ, ಕಾನೂನು ಸಲಹೆ ಪಡೆದ ನಂತರ ಸರ್ಕಾರದಿಂದ ವಿವರಣೆ ಕೋರಿದ್ದಾರೆಂದು ಉನ್ನತ ಮೂಲಗಳು ತಿಳಿಸಿವೆ. ಕೈಗಾರಿಕಾ ಸಚಿವರೂ ಆಗಿರುವ ಎಂ.ಬಿ. ಪಾಟೀಲ್, ಕೆಐಎಡಿಬಿ ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಿದ್ದಾರೆ, ಮೂಲೆ ಹಾಗೂ ಬಿಡಿ ನಿವೇಶನಗಳನ್ನು (5ನೇ ಪುಟಕ್ಕೆ)



ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್




# ಜೆ25, ವೀರಶೈವ ಕಾಂಪ್ಲೆಕ್ಸ್, ಈರುಳ್ಳಿ ಮಾರ್ಕೆಟ್, ಪಿ.ಬಿ. ರಸ್ತೆ ಹಿಂಭಾಗ, ದಾವಣಗೆರೆ - 577 002. ದೂ. : 08192-270390



ಅಜ್ಜಂಪುರ ಎಸ್. ಮೃತ್ಯುಂಜಯ
ಅಧ್ಯಕ್ಷರು



ದೇವಿಗೆರೆ ಪ್ರಭಾಕರ್ – ನಿರ್ದೇಶಕರು
ಆರ್. ನಾಗನಗೌಡ – ನಿರ್ದೇಶಕರು
ಕೆ. ಬಸವರಾಜ್ – ನಿರ್ದೇಶಕರು
ದೇವರಮನೆ ನಾಗರಾಜ್ – ನಿರ್ದೇಶಕರು
ಇ.ಎಂ. ಮಂಜುನಾಥ – ನಿರ್ದೇಶಕರು
ಶ್ರೀಮತಿ ಭಾರತಿ ವೀರೇಶ್ – ನಿರ್ದೇಶಕರು
ಶ್ರೀಮತಿ ಅಮೃತ ವಿ. ಪಾಟೀಲ್ – ನಿರ್ದೇಶಕರು



ಆರ್.ಎಸ್. ಶೇಖರಪ್ಪ
ಉಪಾಧ್ಯಕ್ಷರು


24ನೇ ವಾರ್ಷಿಕ ಮಹಾಸಭೆಯ ನೋಟಿಸ್

ಸಂಸ್ಥೆಯ 2023-2024ನೇ ಸಾಲಿನ ಇಪ್ಪತ್ತನಾಲ್ಕನೇ ವಾರ್ಷಿಕ ಮಹಾಸಭೆಯು ದಿನಾಂಕ 24-09-2024 ನೇ ಮಂಗಳವಾರ ಬೆಳಿಗ್ಗೆ 11-30 ಗಂಟೆಗೆ ಡಾ. ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠ, ವಾಟರ್ ಟ್ಯಾಂಕ್ ಪಕ್ಕ, ಎಂ.ಸಿ.ಸಿ.'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಏರ್ಪಡಿಸಿರುತ್ತದೆ. ಆದ್ದರಿಂದ ಸರ್ವ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ನಡೆಸಿಕೊಡಬೇಕಾಗಿ ವಿನಂತಿ.

ಸಹಿ/- ಕಾರ್ಯದರ್ಶಿ



ಭಾವಪೂರ್ಣ ಶ್ರದ್ಧಾಂಜಲಿ



ನಮ್ಮ ಬಾಲ್ಯ ಸ್ನೇಹಿತರಾದ ಶ್ರೀನಿವಾಸ್ ದಾಸಕರಿಯಪ್ಪ ಅವರ ತಂದೆಯವರಾದ

ಶ್ರೀ ಟಿ. ದಾಸಕರಿಯಪ್ಪ

ಅವರು, ದಿನಾಂಕ 22-09-2024ರಂದು ನಿಧನರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- A N P ಗ್ರೂಪ್ of Friends.
- Lourds - 97 ಬ್ಯಾಚ್ ಗ್ರೂಪ್ of Friends.
- A N P Convent ಸಿಬ್ಬಂದಿ ವರ್ಗ.
- ತುಂಗಭದ್ರಾ ಶುದ್ಧ ನೀರಿನ ಘಟಕ, ಚರ್ಚ್ ರಸ್ತೆ, ದಾವಣಗೆರೆ.
- ಸ್ನೇಹ ಡೆಂಟಲ್ ಕ್ಲಿನಿಕ್, ಚರ್ಚ್ ರಸ್ತೆ, ದಾವಣಗೆರೆ.
- ಶಾರದಾ ಬುಕ್ ಸ್ಟಾಲ್, ಚರ್ಚ್ ರಸ್ತೆ, ದಾವಣಗೆರೆ.



ಅಭಿವೃದ್ಧಿಯ ಹರಿಕಾರರೂ, ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರೂ ಆದ



ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್

ಅವರಿಗೆ 57 ನೇ ವರ್ಷದ ಜನ್ಮದಿನದ ಶುಭಾಶಯಗಳು.



ಡಾ. ಜಿ.ಸಿ. ಬಸವರಾಜ್
Professor of Orthopedics

ಶಿಲ್ಪ ಡಯಾಗ್ನೋಸ್ಟಿಕ್ ಸೆಂಟರ್
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.





ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 23.09.2024ರ ಸೋಮವಾರ ನಿಧನರಾದ ದಾವಣಗೆರೆ ಎಂ.ಸಿ.ಸಿ. ಬಿ ಬ್ಲಾಕ್ ವಾಸಿ, ವೀನಸ್ ಕ್ರಿಕೆಟ್ ಕ್ಲಬ್ ಕಾರ್ಯದರ್ಶಿಗಳೂ ಮತ್ತು ಕೆ.ಎಸ್.ಸಿ.ಎ. ತುಮಕೂರು ವಲಯದ ಸಂಚಾಲಕರಾದ ಕೆ. ಶಶಿಧರ್ ಅವರ ಧರ್ಮಪತ್ನಿ


ಶ್ರೀಮತಿ ಭಾನುಮತಿ ಶಶಿಧರ್

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ವೀನಸ್ ಕ್ರಿಕೆಟ್ ಕ್ಲಬ್, ದಾವಣಗೆರೆ.



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 22.09.2024ರಂದು ನಿಧನರಾದ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ, ಜನತಾ ಪರಿವಾರದ ಹಿರಿಯ ಮುತ್ಸದ್ದಿಗಳೂ, ಜಿಲ್ಲಾ ಜೆಡಿಎಸ್ ಮಾಜಿ ಅಧ್ಯಕ್ಷರೂ, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷರೂ, ಹಿರಿಯ ಕುಸ್ತಿಪಟುಗಳೂ, ನಮ್ಮ ಬಂಧುಗಳೂ ಆದ

ಶ್ರೀ ಟಿ. ದಾಸಕರಿಯಪ್ಪ

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

ಶ್ರೀಮತಿ ದೇವಮ್ಮ, ದಾಗಿನಕಟ್ಟೆ ಬಸವಂತಪ್ಪ ಮತ್ತು ಮಕ್ಕಳು, ಶಾಮನೂರು.

# 'ಆತ್ಮನಿವೇದನೆ'ಯ ಅಪರೂಪದ ಗುರು

'ಸತ್ಪುರುಷನ ಸಹವಾಸದಿಂದ ದುಷ್ಟನೂ ಸತ್ಪುರುಷನಾಗುತ್ತಾನೆ. ಅದು ಹೇಗೆಂದರೆ ಪರರ ನಿಂದೆಯನ್ನು ಮಾಡುವವನೇ ದುಷ್ಟ ಪುರುಷನು. ಸತ್ಪುರುಷನು ಅವನನ್ನು ಪ್ರತಿಯಾಗಿ ನಿಂದಿಸದೆ ಅವನ ವಿಷಯದಲ್ಲಿ ಉದಾಸೀನನಾಗಿರುತ್ತಾನಾದುದರಿಂದ ದುಷ್ಟನು ನಿಂದಿಸಿ ನಿಂದಿಸಿ ಬೇಜಾರಾಗುತ್ತಾನೆ. ಅವನಿಗೆ ಸಾಕಾಗಿ ಹೋಗುತ್ತದೆ. ಆನಂತರ ತನ್ನೊಳಗೆ ನಾನೇಕೆ ಈ ರೀತಿಯಾಗಿ ಹುಚ್ಚನಂತೆ ನಿಂದಿಸುತ್ತೇನೆ? ಇದು ಶುದ್ಧ ಅನ್ಯಾಯ. ಆದ್ದರಿಂದ ಇನ್ನು ಮುಂದೆ ಪರನಿಂದೆಯನ್ನು ಮಾಡಬಾರದೆಂಬ ತಿಳಿವಳಿಕೆಯುಂಟಾಗುತ್ತದೆ. ಈ ರೀತಿಯ ತಿಳುವಳಿಕೆ ಹುಟ್ಟಲು ಸತ್ಪುರುಷನು ಪ್ರತಿನಿಂದೆಯನ್ನು ಮಾಡದೆ ಉದಾಸೀನವಾಗಿದ್ದು ನಿಂದಕನಿಗೆ ವಿಚಾರಿಸಲವಕಾಶವನ್ನು ಕೊಡುವುದೇ ಈ ಪರಿಣಾಮಕ್ಕೆ ಕಾರಣವಾಗುತ್ತದೆ. ಯಾರಾದರೂ ಸತ್ಪುರುಷರನ್ನು ನಿಂದಿಸುತ್ತಾರೆಂದರೆ ಅದು ಅವರ ಸೌಭಾಗ್ಯ. ಯಾಕೆಂದರೆ ಪರಿಣಾಮದಲ್ಲಿ ಅವರಿಗೆ ಸುಜ್ಞಾನವು ಹುಟ್ಟುತ್ತಾದುದರಿಂದ. ಎಲೈ ಮಾನವ! ನಾನು ಸತ್ಯವಾಗಿ ಹೇಳುತ್ತೇನೆ. ಆದುದರಿಂದಲೇ ಸಜ್ಜನರ ಸಹವಾಸದಿಂದ ದುರ್ಜನರೂ ಸಜ್ಜನರಾಗುತ್ತಾರೆಂದು ಹಿರಿಯರು ಹೇಳುವುದು. ಆದ್ದರಿಂದಲೇ ಸತ್ಪುರುಷರಿಗೆ ಈ ಜಗತ್ತಿನಲ್ಲಿ ದೇವತೆಗಳಿಗಿಂತಲೂ ಮಿಗಿಲಾದ ಪೂಜ್ಯ ಸ್ಥಾನವು ದೊರೆತಿರುವುದು'. (ಪು: 121-122) 24-25ರ ಹರೆಯದ ತರುಣ ಸನ್ಯಾಸಿಯ ದಿನಚರಿಯ ನುಡಿಗಳಿವು. ಹೀಗೆ ಬರೆದು ಅದರಂತೆ ಬಾಳಿದವರು 20ನೆಯ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು. ಅವರ ಬದುಕೇ ರೋಚಕವಾದುದು.

'ಕಾಲವನ್ನರಿತು ಮಾತನಾಡುವುದೂ ಮೌನವೇ. ಜಗತ್ತಿನಲ್ಲಿ ಅಲ್ಪ ಭಾಷಿಯೇ ಬುದ್ಧಿವಂತನು. ಗಾಂಭೀರ್ಯವಿಲ್ಲದವನ ಬಾಳು ಗಾರ್ದಭನ ಬಾಳು. ಶಾಂತಿಯು ಸ್ವರ್ಗೀಯ ಪಿತಾಮಹನ ಕೃಪೆಯು. ಶಾಂತನು ಸುಖಿಯು. ಪರರ ನಿಂದೆಯನ್ನು ಸಹಿಸುವವನು ಸುಖಿಸುತ್ತಾನೆ. ಯಾರನ್ನೂ ಆತ್ಮೀಯರೆಂದು ತಿಳಿಯಬಾರದು. ಸಂಸಾರವೆಂಬುದೊಂದು ಸಂತೆ. ಸಂತೆಯಲ್ಲಿ ಎಷ್ಟು ವ್ಯವಹರಿಸಬೇಕೋ ಅಷ್ಟೆ. ದೇವರಲ್ಲಿ ಅಸೀಮವಾದ ವಿಶ್ವಾಸವಿಟ್ಟವನು ಪಾರಾಗುತ್ತಾನೆ. ನನಗೇನಾದರೂ ಸುಖವಾಗಿದೆಯೆಂದರೆ ಈಶ್ವರನಿಂದಲೇ. ಬ್ರಹ್ಮಚರ್ಯೆಯು ಉತ್ತಮವಾದ ತಪವು'. (ಪು: 72) ತಾರುಣ್ಯದಲ್ಲಿ ಇಂಥ ಸಂದೇಶಗಳು ಹೊರಹೊಮ್ಮಲು ಸಾಧ್ಯವೇ ಎನ್ನುವವರು 'ಆತ್ಮನಿವೇದನೆ' ಕೃತಿಯನ್ನು ಓದಲೇಬೇಕು.

'ಸಮಾಜದ ಪರಿಸ್ಥಿತಿಯು ಇದೇ ರೀತಿಯಲ್ಲಿದ್ದರೆ ಸುಧಾರಣೆಯು ಬರುವುದು ತುಂಬಾ ಕಷ್ಟ. ನಮ್ಮ ಸಮಾಜಕ್ಕೆ ಮುಖ್ಯವಾಗಿ ಮೂರು ವರ್ಗಗಳ ಸುಧಾರಣೆಯು ನಡೆಯಬೇಕಾಗಿದೆ. ಮೊಟ್ಟಮೊದಲು ಗುರು ವರ್ಗದಲ್ಲಿರುವ ಅನೈಕ್ಯವು ದೂರವಾಗಿ ಗುರುಗಳಾದವರೆಲ್ಲರೂ ಶಿಷ್ಯ ಸೇವೆಯೇ ಈಶಸೇವೆಯೆಂಬ ಮಂತ್ರವನ್ನು ಗ್ರಹಿಸತಕ್ಕವರಾಗಬೇಕು. ಎರಡನೆಯದಾಗಿ ಜಂಗಮರಲ್ಲಿ ವೈದಿಕ ಮತ್ತು ಧಾರ್ಮಿಕ ಸುಧಾರಣೆಗಳು ಬರಬೇಕು. ಮೂರನೆಯದಾಗಿ ಶಿಷ್ಯವರ್ಗದಲ್ಲಿ ಧಾರ್ಮಿಕ, ನೈತಿಕ ಮತ್ತು ವಿದ್ಯಾವಿಷಯಕ ಸುಧಾರಣೆಗಳು ನಡೆಯಬೇಕು. ಇದೆಲ್ಲಾ ನಡೆಯಲು ಇಡೀ ಪ್ರಪಂಚದ ಈ ಸಮಾಜವು ಒಗ್ಗಟ್ಟಾಗದೇ ಸಾಧ್ಯವಿಲ್ಲ. ಒಗ್ಗಟ್ಟಾಗಲು ಜನರಲ್ಲಿರುವ ಸಂಕುಚಿತ ಬುದ್ಧಿಯು ದೂರವಾಗಬೇಕು. ಒಗ್ಗಟ್ಟಾಗದೆ ಯಾವ ಕಾರ್ಯವೂ ನಡೆಯುವುದಿಲ್ಲ. ಇದಕ್ಕಾಗಿ ಉಪಾಯವೇನೆಂದರೆ ಸಮಾಜಿಕರನ್ನೆಲ್ಲಾ ಕೂಡಿಸಿ ಒಂದು ಮಧ್ಯಸ್ಥಳದಲ್ಲಿ ಸಾಧು ವೀರಶೈವ ಸಂಯುಕ್ತ ಸಭೆಯನ್ನು ನಡೆಸಿ ಅಲ್ಲಿ ಈ ವಿಷಯವನ್ನು ದೇಶದವರೆದುರಿನಲ್ಲಿಡಬೇಕು. ಅವರ ಅವಗಾಹನೆಗೆ ತಂದು ಅದರಲ್ಲಿರುವ ಮಹತ್ತರವಾದ ಪ್ರಯೋಜನವನ್ನು ತೋರಿಸಿಕೊಡಬೇಕು. ಹಾಗೆ ಮಾಡಿದರೆ ಈ ಸಮಾಜವು ಒಗ್ಗಟ್ಟಾಗುತ್ತದೆ. ಆನಂತರ ಸುಧಾರಣೆಗಳು ತಾನಾಗಿ ತಾನೇ ಬರುತ್ತವೆ'. (ಪು: 143-144) ಇಲ್ಲಿ ಸಮಾಜ ಸುಧಾರಣೆ, ಗುರುವರ್ಗದ ಅನೈಕ್ಯತೆ ಭಕ್ತರ ಜವಾಬ್ದಾರಿ ಮುಂತಾದ ವಿಷಯಗಳಿವೆ.

'ಕೈಲಾಗದವನಾದರೆ ಈ ಮಾರ್ಗದಿಂದಲೇ ದೂರವಿರು. ಈ ಪವಿತ್ರ ಮಾರ್ಗಕ್ಕೆ ಕಳಂಕವನ್ನು ತರಬೇಡ. ಸಾರಿ ಸಾರಿ ಹೇಳುತ್ತೇನೆ. ವಿನಯದಿಂದ ಬೇಡಿಕೊಳ್ಳುತ್ತೇನೆ. ಗುರುತ್ವದ ಪವಿತ್ರತೆಯು ಜಗತ್ತಿನಲ್ಲಿ ಶಾಶ್ವತವಾಗಿರಲಿ. ಆಡಂಬರದ ಡಾಂಭಿಕದ ಗುರುತ್ವವನ್ನು ಕೈಬಿಡು. ಗುರುವಾಗು. ನಿಜವಾದ ಗುರುತ್ವದ ಮಹಿಮೆಯನ್ನು ಜಗತ್ತಿಗೆ ಬೋಧಿಸು. ಜಗದೀಶ್ವರ! ಗುರುತ್ವವನ್ನು ಕಾಪಾಡು' (ಪು: 144) ಎಂದು ಗುರುತ್ವಕ್ಕೆ ಉಪದೇಶ ಮಾಡಿದ್ದಾರೆ ಎನ್ನುವುದಕ್ಕಿಂತ ತಮಗೇ ಉಪದೇಶ ಮಾಡಿಕೊಂಡು ನಿಜವಾದ ಗುರುವಾಗಿ ಬಾಳಿದವರು. 'ವ್ಯಭಿಚಾರವನ್ನು ಮಾಡುವ ನಾಮಧಾರಿ ಗುರುಗಳನ್ನು ನೋಡಲು ಸಹ ಮನಸ್ಸು ಬರುವುದಿಲ್ಲ. ದೇವರೇ! ಈ ಜಗತ್ತಿನಲ್ಲಿ ಯಾರೂ ಇಲ್ಲವಲ್ಲ. ಈ ಗುರು ವರ್ಗದವರಿಗೂ ಸಹ ಸ್ವಲ್ಪವೂ ಜ್ಞಾನವಿಲ್ಲವಲ್ಲ! ಶಿಷ್ಯರ ಭಯವೇ ಇಲ್ಲ. ಮೂರ್ಖ ಶಿಷ್ಯರು. ಇಂಥ ನೀಚರನ್ನು ಹೊಡೆದೇಕೆ ಓಡಿಸಬಾರದು? ಇಂಥವರಿಗೆಲ್ಲ ಬೆಲೆಯನ್ನು ಕೊಡುತ್ತಾ ಹೋದರೆ ಜಗದ್ವ್ಯಾಪಾರವೆಲ್ಲಾ ಕೆಟ್ಟು ಹೋಗುವುದರಲ್ಲಿ ಸಂಶಯವಿಲ್ಲ. ಇಂತಹ ಮೂರ್ಖ ಶಿಷ್ಯರಿಗೆ ಇಂತಹ ಗುರುಗಳೇ ಯೋಗ್ಯರೆಂದೂ ಹೇಳಬಹುದು. ಅಯ್ಯೋ ನೀಚ ಗುರು ವರ್ಗವೇ! ನಿಮ್ಮ ಅಂತಸ್ತು ಎಲ್ಲಿತ್ತು! ಈಗ ಎಲ್ಲಿಗೆ ಬಂದಿರುತ್ತೆ! ನೀವು ದೇವರಿಗೂ ದೇವರಾಗಿದ್ದಿರಲ್ಲಾ. ಈ ದಿನ ನಿಮ್ಮ ಈ ಅವನತಿಗೆ ಕಾರಣವೇನೆಂಬುದನ್ನು ಸ್ವಲ್ಪವಾದರೂ ಆಲೋಚಿಸಬಾರದೇ? ಈ ನೀಚ ಪ್ರವೃತ್ತಿಯನ್ನು ನಾಶಮಾಡಿ ಗುರು ವರ್ಗವನ್ನೆತ್ತಿ ಕಾಪಾಡು!' (ಪು: 145)

'ಯಾರೆಷ್ಟು ದ್ವೇಷಿಸಿದರೂ ಪರಮಾತ್ಮನು ಕಾಪಾಡಬೇಕು. ಮನುಷ್ಯನು ಮನುಷ್ಯನನ್ನು ಕೆಡಿಸಲಾರನು. ಪರಮೇಶ್ವರನ ಕೃಪೆಯು ತಪ್ಪಿದರೆ ಯಾರೂ ಕಾಪಾಡಲಾರರು. 'ನಾನು ನಾನು' ಎಂಬ ಅಹಂಕಾರಕ್ಕೆ ಇದಿರಾರೂ ಇಲ್ಲ. ನಮ್ಮಲ್ಲಿರುವ ಸತ್ಯವು ನಮ್ಮನ್ನು ಕಾಪಾಡಬೇಕೇ ವಿನಃ ಇನ್ನಾರೂ ಕಾಪಾಡಲಾರರು' (ಪು: 146) ಎಂದು ಬರೆದಿರುವುದು ನೂರಕ್ಕೆ ನೂರು ಸತ್ಯವಾಗಿದೆ. 'ಈಗಿನ ಗುರುಗಳು ಮಾಡಿದಷ್ಟು ಪಾಪವನ್ನು ಮತ್ತಾರೂ ಮಾಡುತ್ತಾ ಇಲ್ಲ. ಎಲೈ ಮೂರ್ಖ ಶಿಷ್ಯ ಸಮುದಾಯವೇ! ನಿಮಗೇನು ಹುಚ್ಚು ಹಿಡಿದಿದೆ. ಭ್ರಷ್ಟರನ್ನು ಪೂಜಿಸಿ ಪರಮೇಶ್ವರನ ರಾಜ್ಯದಲ್ಲಿ ಅಸತ್ಯಕ್ಕೆ ಬೆಲೆಯನ್ನೇರಿಸುತ್ತಿರುವಿರಲ್ಲಾ! ಸತ್ಯವನ್ನು ಜೀವಸಹಿತ ಹೂಣುತ್ತಿರುವಿರಲ್ಲಾ! ನೀವು ಭ್ರಾಂತರಾಗಿರುವಿರಿ. ನೀಚ ಗುರುವರ್ಗ! ಅಧಮ ಗುರುವರ್ಗ! ಜಗ್ದ್ರೋಹಿ! ನಿನಗೆ ಧಿಕ್ಕಾರ!' (ಪು: 147) ಹೀಗೆ ಬರೆಯಲು ಎಂಟೆದೆಯೇ ಬೇಕು. 'ಯಾವನು ತಾನು ಪೂಜ್ಯನು, ದೊಡ್ಡವನು, ಒಳ್ಳೆಯವನು ಎಂದು ತಿಳಿದುಕೊಂಡಿದ್ದಾನೋ, ಅವನು ಕೇವಲ ವಾಚಿಕ ಪೂಜ್ಯನಾಗದೆ ಅವುಗಳಿಗೆ ಬೇಕಾಗುವ ಗುಣಗಳನ್ನು ಸಂಪಾದಿಸಿದರೆ ಪ್ರತಿಯೊಬ್ಬರೂ ವಂದಿಸುತ್ತಾರೆ. ಅದನ್ನು ಬಿಟ್ಟು ಸಾಮಾನ್ಯನೂ ಮಾಡಲಾರದಂತಹ ದುಷ್ಟ ಕೃತ್ಯಗಳೆಂದರೆ ಸುಳ್ಳು, ವ್ಯಭಿಚಾರ ಇತ್ಯಾದಿಗಳನ್ನು ಮಾಡಿದರೆ ಯಾರೂ ಪೂಜಿಸಲಾರರು. ಅಲ್ಲದೆ ಅವನು ಪ್ರತ್ಯಕ್ಷವಾಗಿ ಅಧೋಗತಿಯನ್ನು ಹೊಂದದಿರಲಾರನು, ಪರಮೇಶ್ವರ! ಶಾಸ್ತ್ರ ಶಿಷ್ಟಾಚಾರ ದ್ರೋಹಿಗಳು ಸಮಾಜದಿಂದ ತೊಲಗಬೇಕು'. (ಪು: 148)

'ಎಲೈ ನೀಚ ಮನಸ್ಸೇ! ನಿನ್ನ ಪಾಪ ಕೃತ್ಯಗಳಿಗೆ ಸೀಮೆಯೇ ಇಲ್ಲ. ಹೀಗೆ ನೀನು ಎಷ್ಟು ದಯನೀಯ ಜನರನ್ನು ಅಧೋಮಾರ್ಗಕ್ಕೆ ಕಳುಹಿಸಿರಲಿಕ್ಕಿಲ್ಲ? ನೀನು ಹೀಗೆ ದುರ್ವಿಚಾರಗಳಿಂದ ವ್ಯಾಪ್ತನಾಗಿ ನಿನಗಾಧಾರ ಮಾತ್ರನಾಗಿರುವ ಪರಮಾತ್ಮನ ಪುತ್ರನಾದ ಜೀವಾತ್ಮನನ್ನು ಬಂಧನಕ್ಕೀಡುಮಾಡುತ್ತೀಯಲ್ಲಾ? ಇದರಿಂದುಂಟಾಗುವ ಪರಹಿಂಸೆಯ ಪಾಪ ಭಯವು ನಿನಗಿಲ್ಲವೇ? ಬರವಣಿಗೆಯಲ್ಲೇನೋ ಓದುವವರಿಗೆ ಕಾಣುವಂತೆ ಪಶ್ಚಾತ್ತಾಪ ವಾಕ್ಯ ಮಾಲೆಗಳು ಸೃಷ್ಟಿಸಲ್ಪಡುತ್ತವೆ. ಆದರೆ ಅಂತರಂಗವು ಮಾತ್ರ ಪಾಪ ಚಿಂತನೆಯನ್ನು ಬಿಡುವುದಿಲ್ಲ. ಎಲೈ ಮನಸ್ಸೇ! ಸಾಕು ಬಿಡು ಪಾಪ ಚಿಂತನೆಯನ್ನು. ವ್ಯರ್ಥವಾಗಿ ಗುರುದ್ರೋಹ, ದೇವದ್ರೋಹ, ದೇಶದ್ರೋಹಕ್ಕೆ ಪಾತ್ರನನ್ನಾಗಿ ಮಾಡಬೇಡ'. (ಪು: 85-86) 'ಜಗತ್ತಿಗೆ ಸುಖವು ಸಿಗಬೇಕಾದರೆ ಅಧ್ಯಾತ್ಮ ವಿದ್ಯೆಯಿಂದ. ಅಧ್ಯಾತ್ಮ ವಿದ್ಯೆಯನ್ನು ಪ್ರಚಾರ ಮಾಡುವವರಾರು? ಧರ್ಮಗುರುಗಳು. ನಾಮಧಾರಿ ಗುರುಗಳಿಂದ ಲೋಕಕ್ಕೆ ಹಾನಿ. ಧರ್ಮಗುರುಗಳಲ್ಲಿ ಸಂಘಟನೆಯಾಗಬೇಕು. ಎಲ್ಲರೂ ತಂತಮ್ಮ ಹಿರಿಯರ ಸಂದೇಶವನ್ನು ಜಗತ್ತಿನೆದುರಿಗೆ ತರಬೇಕು. ಗುರುಗಳು ತಮ್ಮ ಜವಾಬ್ದಾರಿಯನ್ನು ಎಲ್ಲಿಯವರೆಗೆ ತಿಳಿಯುವುದಿಲ್ಲವೋ ಅಲ್ಲಿಯವರೆಗೆ ಜಗತ್ತಿಗೆ ಸುಖವಿಲ್ಲ. ಧರ್ಮ ಗುರುಗಳು ಮೊದಲು ಒಳ್ಳೇ ಸಹವಾಸದಲ್ಲಿದ್ದು ವಿದ್ಯೆಯನ್ನು ಸಂಪಾದಿಸಬೇಕು. ಬಸವಾದಿ ಪ್ರಮಥರ ನುಡಿಯಂತೆ ನಡೆಯನ್ನಿಡಬೇಕು. (ಪು: 61)

'ದಯಾನಿಧೇ! ವಿಷಯಗಳಲ್ಲಿರುವ ಸುಖಬುದ್ಧಿಯು ತೊಲಗಲಿಲ್ಲ. ಅದಕ್ಕಾಗಿ ಮನಸ್ಸು ಪರಿಪರಿಯಾಗಿ ಬಳಲುತ್ತಿದೆ. ನಿನ್ನನ್ನು ಬೇಡಿ ಬೇಡಿ ಬೇಸತ್ತೆನು. ಇದರ ಮೇಲೆ ನಾನೆಷ್ಟು ಪ್ರಾರ್ಥಿಸಿಕೊಳ್ಳುವುದು. ನನಗೆ ಈ ಭಯಂಕರವಾದ ವಿಪತ್ತು ಬಂದಿದೆ. ನೀನು ದೂರ ಮಾಡದಿದ್ದರೆ ಮತ್ತಾರೂ ಸಮರ್ಥರಿಲ್ಲ. ಮನುಷ್ಯನು ಮನಸ್ಸಿನಿಂದಲೇ ಹಾಳಾಗುವುದು, ಉದ್ಧಾರವಾಗು ವುದು ಮನಸ್ಸಿನಿಂದಲೇ. ನನ್ನ ಮನಸ್ಸನ್ನು ಪವಿತ್ರ ಮಾಡಿ ಕಾಪಾಡುವುದು ನಿಮ್ಮ ಭಾರ. ನನ್ನ ಮನಸ್ಸು ವಿಷಯಗಳಲ್ಲಿ ಪ್ರವರ್ತಿಸುವುದೇ ನನಗೆ ಮಹಾ ವಿಪತ್ತು. ಇದನ್ನೊಂದನ್ನು ನಾಶ ಮಾಡಿದರೆ ನನಗೆ ಮತ್ತಾವುದೂ ಬೇಕಿಲ್ಲ... ಎಲೈ ಮನಸ್ಸೇ! ನಿನ್ನ ನಿಜವಾದ ಸ್ವರೂಪವನ್ನು ತಾಳು. ವಿಷಯಗಳು ವಿಷಗಳು. ನಂಬಬೇಡ. ನೀನು ಮೋಸ ಹೊಂದಿದೆ. ಹಿಂದಿನಿಂದ ಪಶ್ಚಾತ್ತಾಪವು ಬಹಳವಾಗುತ್ತದೆ. ಹೊರಗೆ ಸುಖವಿಲ್ಲವೆಂಬುದನ್ನು ದೃಢ ಮಾಡಿಕೋ. ಖಂಡಿತವಾಗಿಯೂ ನಿನ್ನ ಪರಿಸ್ಥಿತಿಯು ಬಹಳ ಶೋಚನೀಯವಾಗಿದೆ. ನೀನು ಶೀಘ್ರವಾಗಿ ಸುಧಾರಿಸಿಕೊಳ್ಳದಿದ್ದರೆ ನಿನ್ನ ಅಧಃಪತನವು ಸಿದ್ಧವಾಗಿದೆ. ನನ್ನ ಹಿತೋಕ್ತಿಗಳನ್ನು ಸ್ವಲ್ಪವಾದರೂ ಕೇಳು. ವ್ಯರ್ಥವಾಗಿ ಕೆಡಬೇಡ. ಬಹಳವಾಗಿ ಹೇಳಿದ್ದೇನೆ'. (ಪು: 49-50)

'ಮಹಾದೇವ! ಖಂಡಿತವಾಗಿಯೂ ನನ್ನ ಪುರಾಕೃತ್ಯಗಳು ಬಲವಾಗಿವೆ. ನಾನು ಸಾಪರಾಧನು. ಲಜ್ಜೆಯು ಬಲವಾಗಿದೆ. ನಾನು ಈ ವಿಪತ್ತಿನಿಂದ ಪಾರಾಗುವುದು ನಿನ್ನ ಕೃಪೆಯಿಲ್ಲದೆ ಸಾಧ್ಯವಿಲ್ಲ, ಅನಾಥನಾಗಿದ್ದೇನೆ. ದೇವ! ನನ್ನ ಕಾಪಾಡು. ಅಯ್ಯೋ! ದೇವರೇ! ನನಗೇಕಪ್ಪಾ ಇಂತಹ ದುರವಸ್ಥೆಯು ಬಂದಿತು. ಮಹಾದೇವ! ಅಪರಾಧ, ಅಪರಾಧ. ನನ್ನನ್ನು ಕ್ಷಮಿಸಿ ಕಾಪಾಡು. ವಿಷಯಾನಲವು ನನ್ನನ್ನು ಸುಡುತ್ತಿದೆ. ಈ ವಿಷಯ ಮಾರುತವು ನನ್ನನ್ನು ಪಾಪಕ್ಕೆ ಹೊತ್ತುಕೊಂಡು ಹೋಗಿ ಹಾಕುತ್ತದೆ. ವಿಷಯ ಪಿಶಾಚಿಯು ನನ್ನನ್ನು ಮರೆಮಾಚಿ ಪಾಪಕ್ಕೆ ಎಳೆಯುತ್ತಿದೆ. ದೇವ! ಸರ್ವಥಾ ನನಗೆ ನೀನೇ ರಕ್ಷಕನು. ದೇವ! ಯಾವ ಸಮಯದಲ್ಲೇನಾಗುತ್ತದೋ ಹೇಳಲು ಸಾಧ್ಯವಿಲ್ಲ. ದಯಮಾಡು. ದರ್ಶನವನ್ನು ಕೊಡು. ಎನ್ನ ಸನ್ನಿತನಾಗಿರುವುದು. ಸಾಕಾಯಿತು. ಈ ಎನ್ನ ದುಃಸ್ಥಿತಿಯು ಎನ್ನ ಕರ್ಮಫಲವು. ಮೌನವಾಗಿರುವುದೇ ಲೇಸು. ಎಷ್ಟು ವದರಿದರೂ ಫಲವೇನು? ತಾ ಪಡೆದಷ್ಟು ಆಗಿಯೇ ತೀರಬೇಕು. (ಪು: 51)

'ವಿಷಯ ವಾಸನೆಯಿಂದ ಹೃದಯವೆಲ್ಲಾ ಕಲುಷಿತವಾಗಿದೆ. ದೇವ! ಹೀಗೆ ಇದ್ದರೆ ನಾನು ಪುಣ್ಯಜೀವಿಯಾಗುವುದೆಂತು? ಪಾವನತೆಯು ನಷ್ಟವಾಗುತ್ತದೆಯಲ್ಲಾ? ಜಗದೀಶ್ವರ! ಖಂಡಿತವಾಗಿಯೂ ನಿನ್ನ ಕೃಪೆಯಿಲ್ಲದೆ ನನಗೆ ಅಸಾಧ್ಯವಾಗಿದೆ. ದೇವಾದಿದೇವ! ಇಷ್ಟು ಕಲ್ಮಷವು ಹೃದಯದಲ್ಲಿದ್ದರೆ ನೀನೆನ್ನಲ್ಲಿರು ವುದೆಂತು? ಖಂಡಿತವಾಗಿಯೂ ನಾನು ಅಪರಾಧಿಯಾಗಿದ್ದೇನೆ. ಮತ್ತು ನಾನೆಷ್ಟು ಪ್ರಯತ್ನಪಟ್ಟರೂ ಮುಂದುವರಿಯುವಂತಿಲ್ಲ. ಕೆಳಗುರುಳಿ ಬೀಳುತ್ತಿರುವೆನು. ಏನಾದರೂ ಆಗಲಿ. ದೇವರೇ ಗತಿ. ನನ್ನಿಂದೇನೂ ಸಾಧ್ಯವಿಲ್ಲ. ವ್ಯರ್ಥವಾಗಿ ಪರಿತಪಿಸುತ್ತಿರುವೆನು. ಈ ಅಕ್ಷಮ್ಯ ಅಪರಾಧವನ್ನು ಕ್ಷಮಿಸೆಂದು ನಿನ್ನಲ್ಲಿ ಅರಿಕೆ ಮಾಡಿಕೊಳ್ಳಲು ನನಗೇನೇ ನಾಚಿಕೆಯಾಗುತ್ತದೆ. ನನಗೀಗ ಮಾತನಾಡಲು ಬಾಯಿಲ್ಲ. ಯಾವುದಕ್ಕೂ ನಿನ್ನ ಸಂಕಲ್ಪವೇ ಕಾರಣ. ದೇವಾಧಿದೇವ! ನೀನು ಉಚಿತವಾಗಿ ತಿಳಿದದ್ದನ್ನು ಮಾಡು. ಸರ್ವಜ್ಞ! ನಿನಗೆ ನಾನೇನು ಹೇಳುವುದೋ ತಿಳಿಯದು. ಕಾಪಾಡು ನಾಥ. ಕಾಪಾಡು. ಅಸಾಧ್ಯ ಪಶ್ಚಾತ್ತಾಪ, ಭಯಂಕರ ಪರಿತಾಪ, ದೇವ! ನೀನೆನ್ನನ್ನು ಬಿಟ್ಟು ಬಿಡುವೆಯಾ!' (ಪು: 84)

'ಓಹೋ! ನನ್ನ ಪಾಶವೀ ಕೃತ್ಯವು ಮಿತಿ ಮೀರುವುದರಲ್ಲಿದೆ. ಜಗದೀಶ್ವರ! ಯಾವುದಕ್ಕೆ ಪ್ರತಿಜ್ಞೆಯನ್ನು ಮಾಡಲಿ? ಮನಸ್ಸು ದುರ್ಬಲವಾದುದಾಗಿರುವುದರಿಂದ ಪ್ರತಿಜ್ಞೆಗಳನ್ನು ಪಾಲಿಸುವುದೇ ಕಠಿಣವಾಗಿದೆ. ಆದದ್ದಾಗಲಿ ಮಾಡುವುದೇನು? ಇಂದಿನಿಂದ ಗಾಂಭೀರ್ಯವನ್ನು ಧರಿಸಬೇಕಾಗಿದೆ. ಗಾಂಭೀರ್ಯವಿಲ್ಲದವನ ಬಾಳು ಗಾರ್ದಭನ ಬಾಳೆಂದು ಹಿಂದೆ ಬರೆದಿರುವೆನು. ಆದರೆ ಅದರಂತೆ ನಡೆಯಲಿಲ್ಲ. ನನ್ನ ತಪ್ಪನ್ನು ನಾನೇ ಅಂಗೀಕರಿಸಲೂ ಸಹ ನಾಚಿಕೆಯಾಗುತ್ತಿಲ್ಲ. ಈ ಭಂಡ ಜೀವನವು ವ್ಯರ್ಥವಾದುದು. ಆದರ್ಶ ಜೀವನ, ಪವಿತ್ರ ಚರಿತ್ರೆಯು ಮಾನವನ ಉನ್ನತಿಗೆ ಕಾರಣವಾದವು. ಈಗಲೇನೋ ಗಾಂಭೀರ್ಯ ಮುದ್ರೆಯನ್ನು ಧರಿಸಬೇಕೆಂದು ಹಿಂದಿನ ನನ್ನ ಕೃತ್ಯಗಳಿಗೆ ಪಶ್ಚಾತ್ತಾಪ ಪಡತಕ್ಕವನಾಗಿ ನಿಶ್ಚಯಿಸುತ್ತಿದ್ದೇನೆ. ಆದರೆ ಅದೆಷ್ಟು ಕಾಲವೋ? ನನಗೇ ವಿಶ್ವಾಸವಿಲ್ಲ. ದೇವರು ಏನು ತಿಳಿದುಕೊಂಡು ಈ ರೀತಿ ಪ್ರೇರಿಸುತ್ತಿದ್ದಾನೋ ತಿಳಿಯಲಾರದು. ಪರರ ಆತ್ಮಕ್ಕೆ ದುಃಖವನ್ನು ಕೊಟ್ಟು ನನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವುದೆಷ್ಟರಮಟ್ಟಿನ ಔಚಿತ್ಯವಾದೀತು. ದೇವರೇ ಈ ಭಂಡನ ಮೇಲೆ ಇನ್ನಾದರೂ ದಯವಿಲ್ಲವೇ? ಎಲೇ ನೀಚ ಮನಸ್ಸೆ! ಇಷ್ಟೇಕೆ ಪಾಪಕೃತ್ಯಗಳನ್ನು ಮಾಡುತ್ತಿರುವೆ'. (ಪು: 85)

'ನಮ್ಮ ನಮ್ಮ ದೋಷಗಳು ನಮಗೆ ಗೊತ್ತಾಗುವುದಿಲ್ಲ. ಆದರೆ ಸುವಿವೇಕಿಯು ಮತ್ತು ಸ್ವಾರ್ಥತಹಿತನೂ ಯೋಚಿಸಬಲ್ಲ. ದೋಷಿಯೂ ಆತ್ಮನನ್ನು ಒಪ್ಪಿಸಿಯೇ ಮಾಡುತ್ತಾನೆ. ನಿರ್ದೋಷಿಯೂ ಆತ್ಮನನ್ನು ಒಪ್ಪಿಸಿಯೇ ಮಾಡುತ್ತಾನೆ. ಆದರೆ ಇವರಿಬ್ಬರೂ ಆತ್ಮಸಂಯಕ ಬುದ್ಧಿಯು ಕೆಲವು ಕಾಲವಾದ ಮೇಲೆ ಜನರಿಂದ ಕಾರ್ಯ ರೂಪದಲ್ಲಿ ಬಂದಾಗ ಪರೀಕ್ಷಿಸಲ್ಪಡುತ್ತದೆ. ಅಥವಾ ಆ ತಕ್ಷಣವೇ ಜಗದೀಶ್ವರನು ನೋಡುತ್ತಾನೆ'. (ಪು-88) 'ದೇವ! ನಿನ್ನ ವಿರಹವು ನನ್ನ ಮನಸ್ಸನ್ನು ಬಾಡಿಸಿತು. ಇಂದು ನಿನ್ನ ದರ್ಶನದಿಂದ ಎನ್ನ ಮನಃಕುಸುಮವು ಅರಳಿ ತನ್ನ ಸೌಗಂಧವನ್ನು ಎಲ್ಲಾ ಕಡೆಗೂ ಬೀರುತ್ತಾ ಇದೆ. ನಾನು ಧನ್ಯನಾದೆನು. ನನ್ನ ಆನಂದಕ್ಕೆ ಪಾರವಿಲ್ಲ, ಆನಂದವೇ ಆನಂದ! ನನ್ನ ಡೈರಿಯನ್ನು ಯಾವ ಪುಣ್ಯಾತ್ಮನು ಓದುತ್ತಾನೋ ಅವನೇ ಧನ್ಯನು!' (ಪು: 132)

**(ಈ ಬರಹವನ್ನು ಶ್ರೀ ತರಳಬಾಳು ಜಗದ್ಗುರು ಬೃಹನ್ಮಠವು ಪ್ರಕಟಿಸಿರುವ 'ಆತ್ಮನಿವೇದನೆ' ಮೂರನೆಯ ಆವೃತ್ತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ).**



**'ಚಂಚಲ ಮನಸ್ಸೇ ಸಮಸ್ತ ವಿಪತ್ತಿಗೂ ಕಾರಣವಾಗಿದೆ. ಎನ್ನೊಳಗೆ ಮನಶ್ಚಂಚಲತೆ, ಕಾಮ ಮತ್ತು ಕ್ರೋಧಗಳೆಂಬ ಮೂರು ಜನ ರಿಪುಗಳಿದ್ದಾರೆ. ಇವರುಗಳನ್ನು ನಾಶ ಮಾಡುವಷ್ಟು ಶಕ್ತಿಯನ್ನು ದಯಪಾಲಿಸಿ ಕಾಪಾಡು ಗುರುವೇ. ಎನ್ನ ಹೃದಯದೊಳಗಿನ ಕಲ್ಮಷವನ್ನು ತೊಳೆದು ನಿರ್ಮಲವಾಗಿ ಮಾಡಿ ಕಾಪಾಡುವುದು ನಿಮ್ಮ ಭಾರ'. (ಪು: 67) 'ನಾನು ಬುದ್ಧಿವಂತ, ನಾನು ಒಳ್ಳೆಯವನು, ನಾನು ಕರ್ತವ್ಯ ದಕ್ಷನೆಂಬ ಬುದ್ಧಿಯು ಅನ್ಯರನ್ನು ನಿಂದಿಸಲೂ ನಿರ್ದೋಷಗಳನ್ನು ಸದೋಷಗಳನ್ನಾಗಿ ಕಾಣಲು ಕಾರಣವಾಗುತ್ತದೆ. ಆದುದರಿಂದ ಎಲೈ ಮಾನವ! 'ಕಾಲೋಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ' ಎಂಬಂತೆ ಈ ದಿನ ನಿನ್ನ ಸಮಾನನಾದ ಮೇಧಾವಿಯಿಲ್ಲ ದಿದ್ದರೂ ಈ ನಿರವಧಿಯಾದ ಕಾಲದಲ್ಲಿ ಎಂದಾದರೂ, ಭೂಮಿಯು ವಿಶಾಲವಾದುದರಿಂದ ಎಲ್ಲಾದರೂ ನಿನ್ನನ್ನು ಮೀರಿಸುವ ಬುದ್ಧಿಶಾಲಿಯು ಖಂಡಿತವಾಗಿಯೂ ಹುಟ್ಟುತ್ತಾನೆ. ಆದುದರಿಂದ ನೀನು ಯಾವಾಗಲೂ ತನ್ನನ್ನು ತಾನಾಗಿಯೇ ಬುದ್ಧಿವಂತನೆಂದರಿಯಬೇಡ. ಇದರಿಂದ ಬಹಳವಾಗಿ ಅನರ್ಥವಾಗುತ್ತದೆಯೆಂಬುದನ್ನು ತಿಳಿದುಕೋ. (ಪು: 70)**



**ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು**
ಶ್ರೀ ತರಳಬಾಳು ಜಗದ್ಗುರು ಶಾಖಾಮಠ
ಸಾಣೇಹಳ್ಳಿ- 577515.
ಮೊ. 94480 57748
ಈಮೇಲ್: swamiji.pss@gmail.com

## ದಾಸಕರಿಯಪ್ಪ ನಿಧನಕ್ಕೆ ಸಿದ್ದೇಶ್ವರ ಶೋಕ

ದಾವಣಗೆರೆ, ಸೆ.23- ದೂಡಾ ಮಾಜಿ ಅಧ್ಯಕ್ಷರೂ, ಜೆಡಿಎಸ್‌ನ ಮಾಜಿ ಜಿಲ್ಲಾಧ್ಯಕ್ಷರೂ, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಹಿರಿಯ ಮುಖಂಡರೂ ಹಾಗೂ ಹಿರಿಯ ಕುಸ್ತಿಪಟುಗಳೂ ಆದ ಟಿ.ದಾಸಕರಿಯಪ್ಪ ಅವರ ನಿಧನಕ್ಕೆ ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ಶೋಕ ವ್ಯಕ್ತಪಡಿಸಿದ್ದಾರೆ. ಮೃತರ ನಿವಾಸಕ್ಕೆ ಭೇಟಿ ನೀಡಿದ್ದ ಸಿದ್ದೇಶ್ವರ ಅವರು, ದಾಸಕರಿಯಪ್ಪ ಅವರ ಪಾರ್ಥಿವ ಶರೀರಕ್ಕೆ ಪುಷ್ಪ ನಮನ ಸಲ್ಲಿಸಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

## ಕೇರಳದಲ್ಲಿ ಎಂಪಾಕ್ಸ್ ಹೊಸ ತಳಿ ಸೋಂಕು

ತಿರುವನಂತಪುರಂ, ಸೆ. 23 - ಕೇರಳದಲ್ಲಿ ಹೊಸ ತಳಿಯ ಎಂಪಾಕ್ಸ್ ಸೋಂಕು ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಸೋಂಕು ಎದುರಿಸುವ ಮಾರ್ಗಸೂಚಿಯಲ್ಲಿ ಬದಲಾವಣೆ ತರುವುದಾಗಿ ಕೇರಳ ಆರೋಗ್ಯ ಇಲಾಖೆ ತಿಳಿಸಿದೆ. ಈ ಸೋಂಕು ಮೊದಲ ಬಾರಿಗೆ ದೇಶದಲ್ಲಿ ಕಂಡು ಬಂದಿದೆ.

ರಾಜ್ಯದ ಉನ್ನತ ಅಧಿಕಾರಿಗಳು ಸಭೆ ನಡೆಸಿ ಪರಿಸ್ಥಿತಿಯ ಅವಲೋಕನ ನಡೆಸಿದ್ದಾರೆ. ಪ್ರಕರಣಗಳು ಹೆಚ್ಚಾದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಗಿದೆ. ಕಳೆದ ವಾರ ಕೇರಳದ ರೋಗಿ ಒಬ್ಬರಲ್ಲಿ ಎಂಪಾಕ್ಸ್ ಸೋಂಕು ಕಂಡುಬಂದಿತ್ತು. 38 ವರ್ಷದ ಮಣಪ್ಪುರಂ ಜಿಲ್ಲೆಯ ವ್ಯಕ್ತಿಯಲ್ಲಿ ಕಂಡು ಬಂದ ಸೋಂಕು ಕ್ಲಾಡೆ 1ಬಿ ಸ್ವರೂಪದ್ದಾಗಿದೆ. ಈ ವ್ಯಕ್ತಿ ಯು.ಎ.ಇ.ಯಿಂದ ಮರಳಿದ್ದರು. ರೋಗಿಯ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ದೆಹಲಿಯ ಮೂಲಗಳು ತಿಳಿಸಿವೆ.

## ಕೇಜ್ರಿ ಕುರ್ಚಿಯಲ್ಲಿ ಕೂರದ ಸಿಎಂ ಆತಿಶಿ



ನವದೆಹಲಿ, ಸೆ. 23 - ಅರವಿಂದ ಕೇಜ್ರಿವಾಲ್ ಅವರು ದೆಹಲಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಬಳಸುತ್ತಿದ್ದ ಕುರ್ಚಿಯಲ್ಲಿ ತಾವು ಕೂರುವುದಿಲ್ಲ ಎಂದು ನೂತನ ಮುಖ್ಯಮಂತ್ರಿ ಆತಿಶಿ ಹೇಳಿದ್ದಾರೆ.

ಕೇಜ್ರಿವಾಲ್ ಕುರ್ಚಿಯ ಪಕ್ಕದಲ್ಲಿ ಅವರು ಬಿಳಿ ಕುರ್ಚಿಯಲ್ಲಿ ಕುಳಿತು ಕಾರ್ಯನಿರ್ವಹಿಸಿದ್ದಾರೆ. ಆತಿಶಿ ಅವರ ಈ ಕ್ರಮ ಸಂವಿಧಾನಿಕ ನಿಯಮ ಹಾಗೂ ಮುಖ್ಯಮಂತ್ರಿ ಹುದ್ದೆಗೆ ಮಾಡಿರುವ ಅವಮಾನ ಎಂದು ಪ್ರತಿಪಕ್ಷಗಳು ಟೀಕಿಸಿವೆ.

ಈ ಬಗ್ಗೆ ಹೇಳಿಕೆ ನೀಡಿರುವ ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ, ಆತಿಶಿ ನಡೆದುಕೊಳ್ಳುತ್ತಿರುವುದು ಆದರ್ಶವಲ್ಲ. ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಅವಮಾನಿಸಿದ್ದಾರೆ ಹಾಗೂ ದೆಹಲಿ ಜನರ ಭಾವನೆಗಳಿಗೆ ನೋವುಂಟು ಮಾಡಿದ್ದಾರೆ. ರಿಮೋಟ್ ಕಂಟ್ರೋಲ್ ಮೂಲಕ ಸರ್ಕಾರ ನಡೆಸಲಾಗುತ್ತಿದೆಯೇ ಎಂಬ ಬಗ್ಗೆ ಕೇಜ್ರಿವಾಲ್ ಉತ್ತರಿಸಬೇಕಿದೆ ಎಂದಿದ್ದಾರೆ.

ಕೇಜ್ರಿವಾಲ್ ಅವರ ಕುರ್ಚಿ ಖಾಲಿ ಬಿಟ್ಟಿರುವುದನ್ನು ನೋಡಿದಾಗ, ಆತಿಶಿ ಅವರು ಡಮ್ಮಿ ಮುಖ್ಯಮಂತ್ರಿ ಎಂಬುದು ಸ್ಪಷ್ಟವಾಗುತ್ತದೆ ಎಂದು ದೆಹಲಿ ಕಾಂಗ್ರೆಸ್ ಅಧ್ಯಕ್ಷ ದೇವೇಂದ್ರ ಯಾದವ್ ಹೇಳಿದ್ದಾರೆ.

ಕುರ್ಚಿ ಖಾಲಿ ಬಿಡುವ ಬಗ್ಗೆ ಮಾತನಾಡಿದ್ದ ಆತಿಶಿ, ರಾಮಾಯಣದಲ್ಲಿ ಶ್ರೀರಾಮ ದೇವರ ಪಾದುಕೆಗಳನ್ನು ಭರತ ಸಿಂಹಾಸನದ ಮೇಲೆ ಇರಿಸಿ ಆಡಳಿತ ನಡೆಸಿದ್ದರು. ನಾನೂ ಸಹ ನಾಲ್ಕು ತಿಂಗಳ ಅವಧಿಗೆ ಅದೇ ರೀತಿ ಕಾರ್ಯನಿರ್ವಹಿಸುತ್ತೇನೆ ಎಂದಿದ್ದರು.

## ಸಿಡಿಲು : ಶಾಲಾ ಮಕ್ಕಳು ಸೇರಿ ಎಂಟು ಜನರ ಸಾವು

ರಾಜನಂದಗಾಂವ್, ಸೆ. 23 - ಛತ್ತೀಸ್‌ಘಡದ ರಾಜನಂದಗಾಂವ್ ಜಿಲ್ಲೆಯ ಹಳ್ಳಿಯೊಂದರಲ್ಲಿ ಸಿಡಿಲು ಬಡಿದು ಶಾಲಾ ಮಕ್ಕಳೂ ಸೇರಿದಂತೆ ಎಂಟು ಜನ ಸಾವನ್ನಪ್ಪಿದ್ದಾರೆ. ಮಧ್ಯಾಹ್ನ 1.30ರ ಸಮಯದಲ್ಲಿ ಜೊರಟರೈ ಹಳ್ಳಿಯಲ್ಲಿ ಈ ಘಟನೆ ನಡೆದಿದೆ. ಸಿಡಿಲಿಗೆ ಸಿಲುಕಿ ಒಬ್ಬರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

**ಸೈಟ್, ಮನೆ ಸೇಲ್ ನೇರ ಓನರ್‌ನಿಂದ**
(1/2%) ಅರ್ಧ ಪರ್ಸೆಂಟ್ ಕಮೀಷನ್
40x60 ಮನೆ, 22x60 ಸೈಟ್, ಕಾರ್ನರ್, MCC 'B' Block ಮನೆ - 30x40 SS 'A' ಮನೆ - 30x43 ಆಂಜನೇಯ ಸೈಟ್ 30x50 ಬಾಲಾಜಿ 30x40 ಮಹಾಲಕ್ಷ್ಮಿ, 30x40 ವಾಜಪೇಯಿ
ಕಿರಣ್ ಬೂಸ್ನೂರ್ (ಏಜೆಂಟ್)
98440 63409
ಬೇರೆ ಏರಿಯಾದಲ್ಲಿ ಬೇಕೇ, ವಿಚಾರಿಸಿ.

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, 30x50 North, 80x60 North, 30x43 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಕಂಪ್ಯೂಟರ್ ಆಪರೇಟರ್ (Ladies & Gents)
ಸಿಲಿಂಡರ್ ಡೆಲಿವರ್ ಬಾಯ್
98441 14143
ಕರೆ ಮಾಡುವ ಸಮಯ : ಬೆಳಿಗ್ಗೆ 11 ರಿಂದ ಮಧ್ಯಾಹ್ನ 2ರವರೆಗೆ.

**ಬೇಕಾಗಿದ್ದಾರೆ**
ಕಾಫೀ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ಪುರುಷ ಅಭ್ಯರ್ಥಿಗಳು ಮಾತ್ರ ನೇರವಾಗಿ ಸಂಪರ್ಕಿಸಿ :
ಎ.ಎನ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ
94482 72734

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 40x70 ಪೂರ್ವ, ಜೈನ್ ಸ್ಕೂಲ್ ಹಿಂಭಾಗ 30x55 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ, 35x50 ಉತ್ತರ-ಪಶ್ಚಿಮ ಕಾರ್ನರ್, 40x70 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರಿಂದ ಸಂಜೆ 5
ಫೋ. : 08192 254736

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್‌ನಲ್ಲಿ 30x38 West, 40 ಅಡಿ ರೋಡಿಗಿದೆ. Rate - 4000/- ಡಾಲರ್ಸ್ ಕಾಲೋನಿಯಲ್ಲಿ ಸ್ವಲ್ಪ ಮೇಲೆ 30x50 North. Rate - 3650/- KHB ಯಲ್ಲಿ 40x60 East. Rate - 2850/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಬಾಡಿಗೆಗೆ / ಲೀಸ್‌ಗೆ ಇವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ ಇಂಡಿಪೆಂಡೆಂಟ್ ಹೌಸ್ ಡುಪ್ಲೆಕ್ಸ್ ಹೌಸ್ 3 ಬೆಡ್ ರೂಮ್ ಮನೆ ಲೀಸ್‌ಗೆ ಇದೆ. ಸಿಂಗಲ್ ಬೆಡ್ ರೂಮ್, ಡಬಲ್ ಬೆಡ್ ರೂಮ್ ಬಾಡಿಗೆಗೆ ಇವೆ. ವಿದ್ಯಾನಗರ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ನೆಲಮಹಡಿಯ ಗೋಡೌನ್ ಬಾಡಿಗೆಗೆ ಇದೆ.**
1500 Sqft & 2500 Sqft Ground Floor Godown Fot Rent. Address - KTJ NAGAR 17th cross, 3rd main, Davangere. Contact :
90080 58121

**ಮತ್ಸ್ಯದ ಮನೆ**
ಮನೆಯಲ್ಲಿ ಬಾಳೆ ಎಲೆ ಮೀನಿನ ಊಟ.
95133 14666
ಪಿಸಾಳೆ ಕಾಪೌಂಡ್, ದಾವಣಗೆರೆ

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಪಿ.ಜೆ. ಬಡಾವಣೆಯಲ್ಲಿ ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
99020 19684

**ಸಿಂಗಲ್ ಬೆಡ್ ರೂಂ ಮನೆ ಲೀಜ್‌ಗೆ ಇದೆ**
700sqft, ಪೈಪ್ ಲೈನ್ ಗ್ಯಾಸ್ ಮತ್ತು ಯುಪಿಎಸ್ ಪಾಯಿಂಟ್ ಸೌಲಭ್ಯ ಹೊಂದಿದೆ, ಬಿಸೈಡ್ ಬಾಪೂಜಿ ಬ್ಯಾಂಕ್ ಸಮುದಾಯ ಭವನ ಎಸ್.ಎಸ್. ಲೇಔಟ್ 'ಎ' ಬ್ಲಾಕ್ 5ನೇ ಕ್ರಾಸ್ ಶಾಮನೂರ್ ರೋಡ್, ನಿಯರ್ ಬಾಟಲ್ ಬಿಲ್ಡಿಂಗ್
74115 33694, 98446 32426

**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಮಾತ್ರ ಬೇಕಾಗಿದ್ದಾರೆ. ವಿದ್ಯಾಭ್ಯಾಸ - ಎಸ್.ಎಸ್. ಎಲ್.ಸಿ. ವಯಸ್ಸು : 25 ರಿಂದ 40ರ ಒಳಗೆ ಕೆಲಸದ ಸಮಯ : ಬೆಳಿಗ್ಗೆ 10 ರಿಂದ ಸಂಜೆ 8.30
ಪರಿಮಳ ಕಾಫೀ ಕಂಪನಿ
ಮಂಡಿಪೇಟೆ, ದಾವಣಗೆರೆ.
94482 72734

**ಬೇಕಾಗಿದ್ದಾರೆ**
ಅಂಗಡಿ ಕೆಲಸಕ್ಕೆ 10ನೇ ಅಥವಾ ಪಿಯುಸಿ ಮುಗಿದ ಹುಡುಗರು ಬೇಕಾಗಿದ್ದಾರೆ.
9008060508

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water.
Vidyanagar last city bus stop, Davangere
8951938228, 8050222181

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**FOR SALE**
Industrial Estate Lokikere Road, Plot No. M-8, IInd Cross, Davangere.
Mesurement : 75x150
3000 Sqft Shed, 37 HP Power
98867 26258
96207 78993

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ಆಟೋಮೊಬೈಲ್ ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಪಿ.ಬಿ. ರೋಡ್, ದಾವಣಗೆರೆ. ಸಂಪರ್ಕಿಸಿ :
89048 09492

**ಅಡುಗೆಯವರು ಬೇಕಾಗಿದ್ದಾರೆ**
ಸಸ್ಯಹಾರಿ ಮತ್ತು ಮಾಂಸಹಾರಿ ಅಡುಗೆಯಲ್ಲಿ ಅನುಭವ ಇರುವವರು, ಅಡುಗೆಯ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ :
95917 25892

**SSLC/PUC ಪರೀಕ್ಷೆಯಲ್ಲಿ ಮತ್ತು ಅವಕಾಶ ವಂಚಿತ ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ**
ದೂರ ಶಿಕ್ಷಣದ ಮುಖಾಂತರ ಆನ್‌ಲೈನ್ ಪರೀಕ್ಷೆ ಮುಖಾಂತರ ಉತ್ತಮ ಫಲಿತಾಂಶಕ್ಕಾಗಿ ಮುಂದಿನ ವಿದ್ಯಾಭ್ಯಾಸ ಮುಂದುವರಿಸಲು/ಸರ್ಕಾರಿ/ಖಾಸಗಿ ಉದ್ಯೋಗಾವಕಾಶ ಪಡೆಯಬಹುದಾದ ಕರ್ನಾಟಕ ಸರ್ಕಾರದ ಪ.ಪೂ. ಮಾರ್ಗಸೂಚಿ ಪಟ್ಟಿಯಲ್ಲಿ (ಸಿಬಿಎಸ್‌ಇ) ಅನುಮೋದಿತಗೊಂಡಿದೆ.
BOSSE-SIKKIM (ಪ್ರವೇಶ ಪ್ರಾರಂಭವಾಗಿದೆ)
SHREYAS CORRESPONDENCE COLLEGE, DCM TownShip, Davangere.
97317 40827, 83107 47112, 97432 20274

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾ ದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
ಭೇಟಿ ಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ ಪಿಜೆ ಬಡಾವಣೆ, ದಾವಣಗೆರೆ.

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**LEARN PROGRAMMING**
`C' Language, OOP'S with C++
Niyam Computers
PJ Extn. Davanagere
Call for more Info :
90367 19573

**ಬೇಕಾಗಿದ್ದಾರೆ**
ಎಸ್ ಎಸ್.ಎಲ್ ಸಿ ಪಾಸ್/ಫೇಲಾಗಿರುವವರು ಸೇಲ್ಸ್ ಮನ್ ಹಾಗೂ ಡಿಲೆವರಿ ಬಾಯ್ಸ್ ಕೆಲಸಕ್ಕೆ ಪಾರ್ಟ್ ಟೈಂ/ಫುಲ್ ಟೈಮ್ ಬೇಕಾಗಿದ್ದಾರೆ. 18 ವರ್ಷ ಮೇಲ್ಪಟ್ಟ ಅನುಭವವುಳ್ಳವರು ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್, ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**ಮನೆ ಲೀಸ್‌ಗೆ ಇದೆ**
'ಎ' ಬ್ಲಾಕ್ ಮೂರನೇ ಕ್ರಾಸ್, ಕೋರ್ಟ್ ಹಿಂಭಾಗ, ದೇವರಾಜ್ ಅರಸ್ ಬಡಾವಣೆ, 2 ಬೆಡ್ ರೂಮ್, 1ನೇ ಫ್ಲೋರ್, ಸಸ್ಯಹಾರಿಗಳಿಗೆ ಮಾತ್ರ.
74111 56285, 81055 57433

**ನೇತ್ರ ದಾನ ಶ್ರೇಷ್ಠ ದಾನ**

**ಬೇಕಾಗಿದ್ದಾರೆ**
ಭಾರತ ಸರಕಾರ DGR & ISO ಮಾನ್ಯತೆ ಪಡೆದ ಧಾರವಾಡದ ಈ ಕಂಪನಿಗೆ ದಾವಣಗೇರಿಯಲ್ಲಿ ಸೆಕ್ಯೂರಿಟಿ ಗಾರ್ಡ ಕೆಲಸಕ್ಕಾಗಿ ಬೇಕಾಗಿದ್ದಾರೆ. ESI, PF ಸೌಲಭ್ಯವಿದೆ.
ಸಂಪರ್ಕಿಸಿರಿ
9632141335

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಾಣಿಜ್ಯ ಕಟ್ಟಡ ಮಾರಾಟಕ್ಕೆ ಬೇಕಾಗಿದೆ**
1000-1500 ಚ. ಅಡಿ ನಿವೇಶನದಲ್ಲಿ ನಿರ್ಮಿಸಿದ ವಾಣಿಜ್ಯ ಕಟ್ಟಡ ಬೇಕಾಗಿದೆ. ಪಿ.ಜೆ. ಬಡಾವಣೆ, ಎಂಸಿಸಿ ಎ ಮತ್ತು ಬಿ ಬ್ಲಾಕ್‌ನಲ್ಲಿರುವ ಕಟ್ಟಡ ಮಾರಾಟಕ್ಕೆ ಬೇಕಾಗಿದೆ.
88848 72070
99862 16320

**ಬೇಕಾಗಿದ್ದಾರೆ**
ಸೀನಿಯರ್ ಅಕೌಂಟೆಂಟ್ : ಟ್ಯಾಲಿ ಪ್ರೈಮ್, ಬಿಲ್ಲಿಂಗ್ ಹಾಗೂ ಜಿಎಸ್ ಟಿ ಫೈಲಿಂಗ್‌ನಲ್ಲಿ ಅನುಭವವುಳ್ಳವರು. ವೇತನ ರೂ.20,000/- ದಿಂದ 25,000/- ವಿಳಾಸ : ರಿಷಿ ಸ್ಪೈಸ್ ಇಂಡಸ್ಟ್ರೀಸ್ ಪ್ರೈ.ಲಿ., ಪಿ.ಬಿ.ರಸ್ತೆ ದಾವಣಗೆರೆ. ಆಸಕ್ತರು ಸ್ವವಿವರವನ್ನು
87927 06279
ನಂಗೆ ವಾಟ್ಸಾಪ್ ಮಾಡಬಹುದು ಅಥವಾ info@risispice.comಗೆ ಇಮೇಲ್ ಮಾಡಬಹುದು.

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards, NEET / IIT - JEE / Olympiads
Memory Techniques + Hand Writing
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**ಬೇಕಾಗಿದ್ದಾರೆ**
ದಾವಣಗೆರೆ ಸಸ್ಯಹಾರಿ ಹೋಟೆಲ್‌ಗೆ ಅಡುಗೆ ಭಟ್ಟರು, ಸಹಾಯಕರು ಬೇಕಾಗಿದ್ದಾರೆ.
73489 30485

**ERA GROUP OF COMPANIES**
**CALL CENTRE**
ಮಹಿಳೆಯರು ಟೆಲಿಕಾಲರ್ಸ್ ಬೇಕಾಗಿದ್ದಾರೆ.
Only for Girls / Ladies, Qualification : SSLC to Degree, Salary - 7000 to 10000/-
ಸ್ಥಳ : KR Market, Davanagere
95350 51589, 78670 75786

**ಶಿಕ್ಷಕ/ ಶಿಕ್ಷಕಿಯರು ಬೇಕಾಗಿದ್ದಾರೆ**
ನಿಸರ್ಗ ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆ ಎಸ್‌ಓಜಿ ಬಡಾವಣೆ, ದಾವಣಗೆರೆ.
1) NTC/RBST/ PUC :- 01
2) BCom/BSc :- 01
3) BSc BEd:-01
4) BPEd/CPEd:-01. ಸಂಪರ್ಕಿಸಿ:
87927 02690, 99862 26454

**ಲೇಡಿಸ್ ಬೇಕಾಗಿದ್ದಾರೆ**
ಕಂಪ್ಯೂಟರ್ ಅನುಭವವಿರುವ ಲೇಡಿಸ್ ಬೇಕಾಗಿದ್ದಾರೆ
ಚೇತನ ಹೋಟೆಲ್ ಹತ್ತಿರ, ದಾವಣಗೆರೆ.
79759 52605
86603 71199

**ಬೇಕಾಗಿದ್ದಾರೆ**
ಅನುಭವವುಳ್ಳ ಮಹಿಳಾ ನರ್ಸ್‌ಗಳು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ : ಅನುಗ್ರಹ ಆಸ್ಪತ್ರೆ ಎಂ.ಸಿ.ಸಿ.'ಬಿ' ಬ್ಲಾಕ್, ದಾವಣಗೆರೆ.
ಮೊ : 80735 15690

**NEED COMPUTER OPERATOR**
FOR CYBER SHOP
Near Ram & Co Circle, DVG
70221 58935

**ಬೇಕಾಗಿದ್ದಾರೆ**
ಅಡಿಕೆ ತೋಟದಲ್ಲಿ ಕೃಷಿ ಹೊಂಡ ಮಾಡಲು ಅನುಭವವಿರುವವರು ಬೇಕಾಗಿದ್ದಾರೆ. ಸಂಪರ್ಕಿಸಿ :
98807 39392

**WANTED**
NIGHT RECEPTIONIST AND ROOM BOY FOR LODGE
98861 58644

## ನವೀಕೃತ ನಿಲ್ದಾಣದಿಂದ ಬಸ್ ಸಂಚಾರ ಆರಂಭ..




ದಾವಣಗೆರೆ : ಕೆ.ಎಸ್.ಆರ್.ಟಿ.ಸಿ. ನವೀಕೃತ ಬಸ್ ನಿಲ್ದಾಣದಿಂದ ಬಸ್ ಸಂಚಾರ ಸೋಮವಾರದಂದು ಪುನರಾರಂಭವಾಗಿದೆ. ಇಲ್ಲಿಯವರೆಗೆ ಹೈಸ್ಕೂಲ್ ಮೈದಾನದಲ್ಲಿರುವ ತಾತ್ಕಾಲಿಕ ಬಸ್ ನಿಲ್ದಾಣದಿಂದ ಸರ್ಕಾರಿ ಬಸ್‌ಗಳು ಕಾರ್ಯನಿರ್ವಹಿಸುತ್ತಿದ್ದವು.




# ದುಶ್ಚಟ ಬಿಡಿ, ಆರೋಗ್ಯದತ್ತ ಗಮನ ಹರಿಸಿ

## ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಸಲಹೆ

ದಾವಣಗೆರೆ, ಸೆ. 23- ದುಶ್ಚಟಗಳಿಂದ ದೂರವಿದ್ದು, ಆರೋಗ್ಯದತ್ತ ಹೆಚ್ಚು ಗಮನಹರಿಸಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ, ಅವರಿಗೆ ಉನ್ನತ ಸ್ಥಾನಮಾನಗಳನ್ನು ಲಭಿಸುವಂತೆ ಮಾಡಿ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಪೌರ ಕಾರ್ಮಿಕರಿಗೆ ಕರೆ ನೀಡಿದರು.

ನಗರದ ಗುಂಡಿ ಮಹದೇವಪ್ಪ ಕಲ್ಯಾಣ ಮಂಟಪದಲ್ಲಿ ಮಹಾನಗರ ಪಾಲಿಕೆ ವತಿಯಿಂದ ಹಮ್ಮಿಕೊಂಡಿದ್ದ ಪೌರ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪೌರ ಕಾರ್ಮಿಕರಿಗೆ ಅನೇಕ ನ್ಯೂನತೆ ಮತ್ತು ಸಮಸ್ಯೆಗಳಿವೆ. ವಿವಿಧ ಬೇಡಿಕೆಗಳನ್ನು ಸಹ ಹಂತ ಹಂತವಾಗಿ ಬಗೆಹರಿಸುವ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಪೌರ ಕಾರ್ಮಿಕರ ಮಕ್ಕಳಿಗೆ ಸರ್ಕಾರಿ ವಸತಿಯುತ ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ನೇರ ಪ್ರವೇಶ ಕಲ್ಪಿಸಲಾಗುವುದು. ಪೌರ ಕಾರ್ಮಿಕರು ತಾವು ದುಡಿದ ದುಡಿಮೆ ಹಣದಲ್ಲಿ ಒಂದಿಷ್ಟು ಹಣವನ್ನು ಉಳಿತಾಯ ಮಾಡಿ ಸದ್ಬಳಕೆ ಮಾಡಿಕೊಳ್ಳುವಂತೆ ಕಿವಿಮಾತು ಹೇಳಿದರು.

ಮಹಾನಗರ ಪಾಲಿಕೆ ಸದಸ್ಯ ಎ. ನಾಗರಾಜ್ ಮಾತನಾಡಿ, ನಿರಂತರ ಹೋರಾಟದ ಫಲವಾಗಿ ಪೌರ ಕಾರ್ಮಿಕರಿಗೆ ವಸತಿ ಗೃಹಗಳು ದೊರೆತಿವೆ. ಫಲಾನುಭವಿಗಳ ಆಯ್ಕೆ ವಿಳಂಬದ ಹಿನ್ನೆಲೆಯಲ್ಲಿ ನಿವೃತ್ತಿಯಾಗಿರುವ ಪೌರ ಕಾರ್ಮಿಕರಿಗೆ ವಸತಿ ಗೃಹಗಳು ಲಭ್ಯವಾಗಿಲ್ಲ. ಪೌರಾಯುಕ್ತರು ಇವರಿಗೂ ವಸತಿ ಸೌಲಭ್ಯ ಕಲ್ಪಿಸಿಕೊಡುವತ್ತ ಚಿತ್ತ ಹರಿಸಬೇಕೆಂದು ಒತ್ತಾಯಿಸಿದರು.

ಪೌರ ಕಾರ್ಮಿಕರ ಅವಿರತ ಶ್ರಮವೇ ನಗರ ಸ್ವಚ್ಛತೆಗೆ ಕಾರಣವಾಗಿದೆ. ಪೌರ ಕಾರ್ಮಿಕರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕ ಮಾತನಾಡಿ, ಪೌರ ಕಾರ್ಮಿಕರು ಸೈನಿಕರಿದ್ದಂತೆ. ಬಿಸಿಲು, ಮಳೆ, ಗಾಳಿ, ಚಳಿ ಯಾವುದನ್ನೂ ಲೆಕ್ಕಿಸದೇ ಮಾಡುತ್ತಿರುವ ಕಾಯಕದಿಂದಲೇ ನಾಗರಿಕರು ಆರೋಗ್ಯದಿಂದ ಇರಲು ಸಾಧ್ಯವಾಗಿದೆ ಎಂದರು.

ಪೌರ ಕಾರ್ಮಿಕರ ದಿನಾಚರಣೆ ಅಂಗವಾಗಿ ಅವರ ಖಾತೆಗೆ ತಲಾ ಎರಡು ಸಾವಿರ ರೂ.ಗಳನ್ನು ಜಮೆ ಮಾಡಲಾಗಿದೆ. 388 ಪೌರ ಕಾರ್ಮಿಕರಿಗೆ ವಸತಿ ಸೌಲಭ್ಯ ಕಲ್ಪಿಸಿಕೊಡಲಾಗಿದೆ. ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ 250 ಪೌರ ಕಾರ್ಮಿಕರನ್ನು ಖಾಯಂಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪೌರ ಕಾರ್ಮಿಕರು ತಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು ಎಂದು ಆಯುಕ್ತರು, ಪೌರ ಕಾರ್ಮಿಕರ ಮಕ್ಕಳಿಗೆ ಆರೋಗ್ಯ ವಿಮೆ, ಪ್ರತಿಭಾ ಪುರಸ್ಕಾರವನ್ನು ನೀಡಲಾಗುತ್ತಿದೆ. ಮಹಾನಗರ ಪಾಲಿಕೆ ಪೌರ ಕಾರ್ಮಿಕರ ಬೆಂಬಲಕ್ಕೆ ಸದಾ ಇರುತ್ತದೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಉಪ ಮಹಾಪೌರರಾದ ಯಶೋಧ ಯಗ್ಗಪ್ಪ, ಸದಸ್ಯರಾದ ಕೆ. ಪ್ರಸನ್ನಕುಮಾರ್, ಗಡಿಗುಡಾಳ್ ಮಂಜುನಾಥ್, ವೀಣಾ ನಂಜಪ್ಪ, ಆಶಾ ಉಮೇಶ್, ಸುಧಾ ಇಟ್ಟಿಗುಡಿ ಮಂಜುನಾಥ್, ಮೀನಾಕ್ಷಿ ಜಗದೀಶ್, ಎಲ್.ಡಿ. ಗೋಣೆಪ್ಪ, ಎಲ್.ಎಂ.ಹೆಚ್. ಸಾಗರ್, ಪೌರಕಾರ್ಮಿಕರ ಸಂಘದ ಪದಾಧಿಕಾರಿಗಳಾದ ಎಲ್.ಎಂ. ಹನುಮಂತಪ್ಪ, ಶಾಹೀದಾ ಬಾನು, ಎನ್. ನೀಲಗಿರಿಯಪ್ಪ, ಪೌರ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ಸೇರಿದಂತೆ ಅನೇಕರಿದ್ದರು.

# ಅಕ್ಕಮಹಾದೇವಿ ಸಮಾಜದಿಂದ ನೇತ್ರದಾನ ಪ್ರೇರಣಾ ಪಕ್ಷಾಚರಣೆ



ದಾವಣಗೆರೆ, ಸೆ. 23-ನಗರದ ಶ್ರೀ ಅಕ್ಕಮಹಾದೇವಿ ನೇತ್ರದಾನ ಪ್ರೇರಣಾ ಸಮಿತಿ, ಜಿಲ್ಲಾ ಅಂಧತ್ವ ನಿಯಂತ್ರಣ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ನೇತ್ರದಾನ ಪ್ರೇರಣಾ ಪಕ್ಷಾಚರಣೆ ದಿನಾಚರಣೆಯನ್ನು ಸ್ಥಳೀಯ ಶ್ರೀಮತಿ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ನೆರವೇರಿಸಲಾಯಿತು.

ಮಹಾತ್ಮ ವಿದ್ಯಾಶಾಲೆಯಲ್ಲಿ ತಪಾಸಣೆ ಮಾಡಿದ ಮಕ್ಕಳಿಗೆ ಉಚಿತ ಕನ್ನಡಕ ವಿತರಿಸಲಾಯಿತು. ವೀರಶೈವ ಪುಣ್ಯಾಶ್ರಮದ ಅಂಧ ಮಕ್ಕಳಿಗೆ ಚಿಕಿತ್ಸೆ ಹಾಗೂ ಕಣ್ಣಿನ ಔಷಧಿ ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಡಾ. ಮಂಜುನಾಥ್ ಪಾಟೀಲ್, ರಂಗನಾಥ್, ಶ್ರೀ ಅಕ್ಕಮಹಾದೇವಿ ನೇತ್ರದಾನ ಪ್ರೇರಣಾ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿಗಳು, ಕಾರ್ಯಕಾರಿಣಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

## ನಗರಕ್ಕೆ ಇಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯಕುಮಾರ್ ಸೊರಕೆ



ದಾವಣಗೆರೆ ಲೋಕ ಸಭಾ ಚುನಾವಣೆ ಹಾಗೂ ಪಕ್ಷದ ಸಂಘಟನೆಗೆ ಸಂಬಂಧಿಸಿದಂತೆ ಚರ್ಚಿಸಲು ಜಿಲ್ಲಾ ಕಾಂಗ್ರೆಸ್‌ನ ಮುಂಚೂಣಿ ಘಟಕದ ಪದಾಧಿಕಾರಿಗಳ ಸಭೆಯನ್ನು ಇಂದು ಮಧ್ಯಾಹ್ನ 12 ಕ್ಕೆ ಜಿಲ್ಲಾ ಕಾಂಗ್ರೆಸ್ ಪಕ್ಷದ ಎಸ್ಸೆಸ್ ಭವನದಲ್ಲಿ ಕರೆಯಲಾಗಿದೆ.ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ಕರೆದಿರುವ ಈ ಸಭೆಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಪ್ರಚಾರ ಸಮಿತಿ ಅಧ್ಯಕ್ಷರಾದ ವಿನಯಕುಮಾರ್ ಸೊರಕೆ ಅವರು ಭಾಗವಹಿಸುವರು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ಕುರಿ ಸಾಕಾಣಿಕೆ ತರಬೇತಿ

ದಾವಣಗೆರೆ, ಸೆ.23- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ನಗರದ ಪಶು ಆಸ್ಪತ್ರೆ ಆವರಣದ ಪಶು ಪಾಲನಾ ಮತ್ತು ಪಶು ವೈದ್ಯಕೀಯ ತರ ಬೇತಿ ಕೇಂದ್ರದಲ್ಲಿ ಆಧುನಿಕ ಹೈನು ಗಾರಿಕೆ, ಕೋಳಿ, ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಶಿಬಿರ ಆಯೋಜಿಸಲಾಗಿದೆ. ಸಂಪರ್ಕಿಸಿ : 08192-233787

## ಸಿರಿಗೆರೆಯಲ್ಲಿ ಇಂದು ಶ್ರದ್ಧಾಂಜಲಿ ಕಾರ್ಯಕ್ರಮ, ಕೃತಿಗಳ ಲೋಕಾರ್ಪಣೆ

ಶ್ರೀ ತರಳಬಾಳು ಜಗದ್ಗುರು ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ 32 ನೇ ಶ್ರದ್ಧಾಂಜಲಿ ಕಾರ್ಯಕ್ರಮ ಹಾಗೂ ಕೃತಿಗಳ ಲೋಕಾರ್ಪಣೆ ಇಂದು ಬೆಳಿಗ್ಗೆ 11 ಗಂಟೆಗೆ ಸಿರಿಗೆರೆಯಲ್ಲಿ ನಡೆಯಲಿದೆ.

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್.ಆರ್. ಬಸವರಾಜಪ್ಪ ಗುರು ವಂದನೆ ಸಲ್ಲಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವರಾದ ಡಾ.ಜಿ. ಪರಮೇಶ್ವರ್, ಎಂ.ಬಿ. ಪಾಟೀಲ್, ಈಶ್ವರ್ ಬಿ. ಖಂಡ್ರೆ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ್ ಎಂ. ಬಿದರಿ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ್, ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಅಮ್ಮಿನಬಾವಿ, ಶಾಸಕ ಯು.ಬಿ. ಬಣಕಾರ್ ಭಾಗವಹಿಸಲಿದ್ದಾರೆ. ಇದೇ ವೇಳೆ ತರಳಬಾಳು ಪ್ರಕಾಶನದ 'ಸಾಹಿತ್ಯ ಸಿರಿ' ಮಾಲಿಕೆಯ ಆತ್ಮ ನಿವೇದನೆ, ಸಂಕಲ್ಪ ಕೃತಿಗಳು ಲೋಕಾರ್ಪಣೆಗೊಳ್ಳಲಿವೆ. ಚಿತ್ರದುರ್ಗ ಶ್ರೀ ಗಾನಯೋಗಿ ಸಂಗೀತ ಬಳಗದ ತೋಟಪ್ಪ ಉತ್ತಂಗಿ ಅವರಿಂದ ವಚನ ಗೀತೆ ಹಾಗೂ ತರಳಬಾಳು ಕಲಾ ಸಂಘದ ಕಲಾವಿದರಿಂದ ವಚನ ನೃತ್ಯ ಕಾರ್ಯಕ್ರಮ ನಡೆಯಲಿದೆ.

## ನಗರದಲ್ಲಿ ಇಂದು ಬಿಐಇಟಿ ಸ್ವಾಯತ್ತ ಸಂಸ್ಥೆ ಉದ್ಘಾಟನಾ ಸಮಾರಂಭ

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯವು ಸ್ವಾಯತ್ತ ಸಂಸ್ಥೆಯಾಗಿ ವಿಟಿಯುನಿಂದ ಅನುಮತಿ ಪಡೆದು ಕಾರ್ಯಾರಂಭ ಮಾಡಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಬಿಐಇಟಿ ಸ್ವಯತ್ತ ಸಂಸ್ಥೆಯ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 10.30ಕ್ಕೆ ಕಾಲೇಜು ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಆಯೋಜಿಸಲಾಗಿದೆ.

## ಈರುಳ್ಳಿ ಮಾರಲು ಕ್ರಮ

(1ನೇ ಪುಟದಿಂದ) ಸಬ್ಸಿಡಿ ಚಿಲ್ಲರೆ ಮಾರಾಟ ವಿಸ್ತರಿಸುವ ಯೋಜನೆ ಇದೆ ಎಂದು ಕೇಂದ್ರ ಗ್ರಾಹಕರ ವ್ಯವಹಾರಗಳ ಕಾರ್ಯದರ್ಶಿ ನಿಧಿ ಖರೆ ಹೇಳಿದ್ದಾರೆ.

ರಫ್ತು ನಿರ್ಬಂಧ ತೆರವುಗೊಳಿಸಿದ ನಂತರ ಬೆಲೆ ಏರಿಕೆಯಾಗುವ ಅಂದಾಜು ಇತ್ತು. ನಮ್ಮ ಬಳಿ 4.7 ಲಕ್ಷ ಟನ್ ಈರುಳ್ಳಿ ದಾಸ್ತಾನಿದೆ. ಮುಂಗಾರು ಬಿತ್ತನೆ ಪ್ರದೇಶವೂ ಹೆಚ್ಚಾಗಿದೆ. ಈರುಳ್ಳಿ ಬೆಲೆ ನಿಯಂತ್ರಣದಲ್ಲಿರುವ ನಿರೀಕ್ಷೆ ಇದೆ ಎಂದವರು ತಿಳಿಸಿದ್ದಾರೆ. ಕಳೆದ ಸೆಪ್ಟೆಂಬರ್ 5ರಿಂದ ಎನ್.ಸಿ.ಸಿ.ಎಫ್. ಹಾಗೂ ನೆಫೆಡ್ ಮೂಲಕ ಕೇಂದ್ರ ಸರ್ಕಾರ ಈರುಳ್ಳಿಯನ್ನು ಕೆಜಿಗೆ 35 ರೂ.ಗಳಂತೆ ಮಾರಾಟ ಮಾಡುತ್ತಿದೆ. ಖಾದ್ಯ ತೈಲ ಆಮದು ತೆರಿಗೆ ಹೆಚ್ಚಳ ಮಾಡಿದ ನಂತರ ತೈಲ ಬೆಲೆ ಹೆಚ್ಚಾಗಿದೆ. ರೈತರನ್ನು ರಕ್ಷಿಸಲು ಈ ಕ್ರಮ ಅಗತ್ಯವಾಗಿದೆ ಎಂದು ನಿಧಿ ಖರೆ ಸಮರ್ಥಿಸಿಕೊಂಡರು.

## ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಸುಧಾಕರ್

(1ನೇ ಪುಟದಿಂದ) ಉಪಾಧ್ಯಕ್ಷರ ಚುನಾವಣೆ ಇಂದು ನಡೆಯಿತು. ಈ ಚುನಾವಣೆಯಲ್ಲಿ ಅವಿರೋಧವಾಗಿ ಸಚಿವ ಡಿ. ಸುಧಾಕರ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಚಿತ್ರದುರ್ಗ ಡಿಸಿಸಿ ಬ್ಯಾಂಕ್‌ಗೆ 2004 ರಿಂದ 2024 ರವರೆಗೂ ಸಚಿವ ಡಿ. ಸುಧಾಕರ್ ಅಧ್ಯಕ್ಷರಾಗಿ ಚುಕ್ಕಾಣಿ ಹಿಡಿಯುವ ಮೂಲಕ ದಾಖಲೆ ಬರೆದಿದ್ದಾರೆ.

# ಪೌರ ಕಾರ್ಮಿಕರ ಸಂಖ್ಯೆ ಹೆಚ್ಚಳಕ್ಕೆ ಶೀಘ್ರ ನಿರ್ಣಯ



## ಮಲೇಬೆನ್ನೂರಿನಲ್ಲಿ ಪುರಸಭೆ ಮುಖ್ಯಾಧಿಕಾರಿ ಭಜಕ್ಕನವರ್ ಭರವಸೆ

ಮಲೇಬೆನ್ನೂರು, ಸೆ.23- ಪೌರ ಕಾರ್ಮಿಕರ ಬೇಡಿಕೆಗಳಿಗೆ ಸರ್ಕಾರಗಳು ಪೂರಕವಾಗಿ ಸ್ಪಂದಿಸುತ್ತಾ ಬಂದಿವೆ ಎಂದು ಪುರಸಭೆ ಮುಖ್ಯಾಧಿಕಾರಿ ಹನುಮಂತಪ್ಪ ಭಜಕ್ಕನವರ್ ಹೇಳಿದರು.

ಅವರು, ಸೋಮವಾರ ಪಟ್ಟಣದ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪೌರ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಲ ಹೊರುವ ಪದ್ಧತಿ ನಿರ್ಮೂಲನೆ, ಪ್ರತಿ ಮನೆಗೂ ಶೌಚಾಲಯ ಕಡ್ಡಾಯಗೊಳಿಸಿರುವುದು, ಪೌರ ಕಾರ್ಮಿಕರನ್ನು ದಿನಗೂಲಿ ನೌಕರರನ್ನಾಗಿ ಮಾಡಿರುವ ಜೊತೆಗೆ ಸಮಾನ ವೇತನಕ್ಕೆ ಒಳಪಡಿಸಿರುವುದೂ ಕೂಡಾ ಸರ್ಕಾರಗಳ ಕ್ರಾಂತಿಕಾರಿ ಬದಲಾವಣೆಗಳಾಗಿವೆ ಎಂದರು.

ಎಲ್ಲಾ ಕಡೆ ಪೌರ ಕಾರ್ಮಿಕರು ಶ್ರದ್ಧೆ, ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರು ಇವರನ್ನು ಗೌರವದಿಂದ ಕಾಣಬೇಕೆಂದು ಹೇಳಿದ ಭಜಕ್ಕನವರ್, ಜನಸಂಖ್ಯಾ ಆಧಾರದ ಮೇಲೆ ಮಲೇಬೆನ್ನೂರು ಪುರಸಭೆಗೆ 35 ಕಾರ್ಮಿಕರ ಅವಶ್ಯಕತೆ ಇದೆ.

ಆದರೆ, ಇಲ್ಲೀಗ 18 ಜನ ಮಾತ್ರ ಇದ್ದಾರೆ. ಪೌರ ಕಾರ್ಮಿಕರ ಸಂಖ್ಯೆ ಹೆಚ್ಚಳ ಮಾಡುವುದು ನಮ್ಮ ಮೊದಲ ಆದ್ಯತೆಯಾಗಿದ್ದು, ನಾಳೆ ದಿನಾಂಕ 25 ರಂದು ನಡೆಯುವ ಪುರಸಭೆಯ ಕೌನ್ಸಿಲ್ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸಿ, ಜಿಲ್ಲಾಧಿಕಾರಿಗಳ ಅನುಮತಿ ಕೋರಲಾಗುವುದೆಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಪುರಸಭೆಯ ಪ್ರಭಾರಿ ಅಧ್ಯಕ್ಷರಾದ ಶ್ರೀಮತಿ ನಪ್ಸೀಯಾ ಬಾನು ಮಾತನಾಡಿ, ನಮ್ಮ ಪಟ್ಟಣವನ್ನು ಸ್ವಚ್ಛವಾಗಿಡುವ ಪೌರ ಕಾರ್ಮಿಕರನ್ನು ಗೌರವದಿಂದ ಕಾಣೋಣ ಎಂದು ಪೌರ ಕಾರ್ಮಿಕರಿಗೆ ಶುಭಾಶಯ ಕೋರಿದರು.

ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಕೆ.ಜಿ.ಲೋಕೇಶ್, ನಯಾಜ್, ಗೌಡ್ರ ಮಂಜಣ್ಣ, ಶ್ರೀಮತಿ ಸುಧಾ ಪಿ. ಆರ್.ರಾಜು, ಶ್ರೀಮತಿ ವಿಜಯಲಕ್ಷ್ಮಿ ಕೆ.ಪಿ.ಗಂಗಾಧರ್, ಸಾಬೀರ್ ಅಲಿ, ಚಮನ್ ಷಾ, ಭಾನುವಳ್ಳಿ ಸುರೇಶ್, ಯುಸೂಫ್, ಪುರಸಭೆ ನಾಮಿನಿ ಸದಸ್ಯ ಎ.ಆರೀಫ್ ಅಲಿ ಮಾತನಾಡಿದರು.

ಪರಿಸರ ಇಂಜಿನಿಯರ್ ಉಮೇಶ್, ಸಮುದಾಯ ಸಂಘಟನಾಧಿಕಾರಿ ದಿನಕರ್, ಆರೋಗ್ಯ ನಿರೀಕ್ಷಕರಾದ ನವೀನ್, ಶಿವರಾಜ್, ಇಮ್ರಾನ್, ಮಂಜುನಾಥ್ ಅವರು, ಪೌರ ಕಾರ್ಮಿಕರಿಗೆ ಶುಭಾಶಯ ಕೋರಿ, ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಪೌರ ನೌಕರರ ಸಂಘದ ಅಧ್ಯಕ್ಷ ಕೀಜರ್ ಅಲಿಖಾನ್, ಉಪಾಧ್ಯಕ್ಷ ಹೆಚ್. ಹಾಲೇಶಪ್ಪ ಮಾತನಾಡಿ, ಪೌರ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಸರ್ಕಾರ ವಿಶೇಷ ನಿಗಾ ವಹಿಸಬೇಕೆಂದು ಮನವಿ ಮಾಡಿದರು.

ಪುರಸಭೆ ಸದಸ್ಯರಾದ ಟಿ. ಹನುಮಂತಪ್ಪ, ಷಾ ಅಬ್ರಾರ್, ಖಲೀಲ್, ಬಿ.ರಫೀಕ್ ಸಾಬ್, ಬಸವರಾಜ್ ದೊಡ್ಮನಿ, ಶ್ರೀಮತಿ ಸುಮಯ್ಯ ಬಾನು ಎಂ.ಬಿ.ರುಸ್ತುಂ, ಜಿಗಳೇರ ಹಾಲೇಶಪ್ಪ, ಓ.ಜಿ.ಕುಮಾರ್ ಹಾಗೂ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಈ ವೇಳೆ ಎಲ್ಲಾ ಪೌರ ಕಾರ್ಮಿಕರನ್ನು ಸನ್ಮಾನಿಸಿ, ಕೊಡುಗೆಗಳನ್ನು ನೀಡಲಾಯಿತು.

ಪುರಸಭೆ ಸದಸ್ಯ ದಾದಾಪೀರ್, ಆರೋಗ್ಯ ನಿರೀಕ್ಷಕ ಶಿವರಾಜ್ ಅವರು ಪೌರ ಕಾರ್ಮಿಕರ ಕುರಿತಾಗಿ ಬರೆದಿರುವ ಕವಿತೆಯನ್ನು ವಾಚನ ಮಾಡಿ, ಎಲ್ಲರ ಗಮನ ಸೆಳೆದರು.

## ನಗರದ ಬಿಎಸ್‌ಸಿ ಕಾಲೇಜಿನಲ್ಲಿ ಇಂದು

ಶ್ರೀ ವಿನಾಯಕ ಎಜ್ಯುಕೇಶನ್ ಟ್ರಸ್ಟ್ ನ ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು ಕನ್ನಡ ವಿಭಾಗ ಮತ್ತು ಪ್ರಸಾರಾಂಗ ಹಾಗೂ ಪದವಿ ಕಾಲೇಜು ಕನ್ನಡ ಅಧ್ಯಾಪಕರ ವೇದಿಕೆ ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಸಂಯುಕ್ತಾಶ್ರಯದಲ್ಲಿ ರಾಜ್ಯ ಶಿಕ್ಷಣ ನೀತಿಯ ಪದವಿ ಕನ್ನಡ ಭಾಷಾ ಪಠ್ಯ ಪುಸ್ತಕಗಳ ಲೋಕಾರ್ಪಣೆ ಹಾಗೂ ಕಾರ್ಯಗಾರವನ್ನು ಇಂದು ಬೆಳಿಗ್ಗೆ 10.30ಕ್ಕೆ ಕಾಲೇಜಿನ ಬಿ.ಎಸ್. ಚನ್ನಬಸಪ್ಪ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಾಚಾರ್ಯ ಪ್ರೊ. ಎಂ.ಸಿ. ಗುರು ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ ಪಠ್ಯ ಪುಸ್ತಕಗಳ ಲೋಕಾರ್ಪಣೆ ಮಾಡುವರು. ಸಾಹಿತಿ ಡಾ. ಲೋಕೇಶ ಅಗಸನಕಟ್ಟೆ ಪಠ್ಯವಲೋಕನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ. ಶಿವಕುಮಾರ ಕಣಸೋಗಿ, ಡಾ. ಜೋಗಿನಕಟ್ಟೆ ಮಂಜುನಾಥ, ಡಾ. ಎಸ್.ಆರ್. ಅಂಜನಪ್ಪ, ಕೆ.ಎಸ್. ಮುರಳಿ, ಡಾ. ಷಣ್ಮುಖ ಪಾಲ್ಗೊಳ್ಳಲಿದ್ದಾರೆ.


**ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ**

ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.

**89ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ**

ದಿನಾಂಕ 25-09-2024 ರ ಬುಧವಾರ ಬೆಳಿಗ್ಗೆ 11.30 ಗಂಟೆಗೆ ಸರಿಯಾಗಿ ಕ್ಲಬ್‌ನ ವಾರ್ಷಿಕ ಮಹಾಸಭೆಯನ್ನು ಕ್ಲಬ್‌ನ ಆವರಣದಲ್ಲಿ ಅಧ್ಯಕ್ಷರಾದ ಶ್ರೀ ಎ.ಬಿ.ಚಂದ್ರಶೇಖರ್ ಇವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಿರುತ್ತದೆ. ಆದ್ದರಿಂದ ಕ್ಲಬ್ ನ ಸದಸ್ಯರುಗಳು ಸಕಾಲಕ್ಕೆ ಆಗಮಿಸಬೇಕಾಗಿ ಈ ಮೂಲಕ ಕೋರಲಾಗಿದೆ.

ಕ್ಲಬ್ ನ ಆಡಳಿತ ಮಂಡಳಿಯ ಪರವಾಗಿ
(ರವಿಶಂಕರ್ ಪಲ್ಲಾಗಟ್ಟಿ)
ಗೌರವ ಕಾರ್ಯದರ್ಶಿಗಳು


# ಎಂ.ಬಿ. ಪಾಟೀಲ್, ಪ್ರಿಯಾಂಕ್ ಖರ್ಗೆಗೂ ವಿವರ ಕೋರಿ ರಾಜಭವನದಿಂದ ನೋಟಿಸ್

(1ನೇ ಪುಟದಿಂದ) ಹರಾಜು ಪ್ರಕ್ರಿಯೆ ಮೂಲಕ ಹಂಚಬೇಕು. ಈ ಎಲ್ಲಾ ಪ್ರಕ್ರಿಯೆಗಳು ಆನ್‌ಲೈನ್‌ನಲ್ಲೇ ನಡೆಯಬೇಕು. ಆದರೆ, ಇವರು ಎಲ್ಲಾ ಕಾನೂನನ್ನು ಗಾಳಿಗೆ ತೂರಿ, ತಮ್ಮ ಆಪ್ತರು ಹಾಗೂ ರಾಜಕಾರಣಿಗಳ ಮಕ್ಕಳಿಗೆ ಹಂಚಿದ್ದಾರೆ ಎಂದು ಕೆಲವು ದಾಖಲೆಗಳ ಸಮೇತ ದೂರು ಸಲ್ಲಿಸಿದ್ದರು.

ಈ ಅಕ್ರಮದಲ್ಲಿ ಅಧಿಕಾರಿಗಳು ಶಾಮೀಲಾ ಗಿದ್ದಾರೆ, ಇದರಿಂದ ಕೆಐಎಡಿಬಿಗೆ ಕೋಟ್ಯಂತರ ರೂ. ನಷ್ಟ ಉಂಟಾಗಿದೆ ಎಂದು ದೂರಿದ್ದರು.

ಇವರು ಕ್ರಿಮಿನಲ್ ಅಪರಾಧ ಎಸಗಿದ್ದಾರೆ, ಆದ್ದರಿಂದ ಭ್ರಷ್ಟಚಾರ ನಿಗ್ರಹ ಕಾಯಿದೆ ಸೆಕ್ಷನ್ 17 ಮತ್ತು 19ರಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದ್ದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದವರು, ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ಕೆಐಎಡಿಬಿಯಿಂದ ಐದು ಎಕರೆ ಜಾಗ ಪಡೆದುಕೊಂಡಿದ್ದಾರೆ.

ಸಚಿವರಾಗಿ ಪ್ರಿಯಾಂಕ್ ಖರ್ಗೆ ಅಧಿಕಾರ ದುರುಪಯೋಗ ಪಡಿಸಿಕೊಂಡು ತಮ್ಮ ಕುಟುಂಬದ ಸಂಸ್ಥೆಗೆ ಬೆಲೆ ಬಾಳುವ ಜಮೀನು ಕೊಡಿಸಿದ್ದಾರೆ ಎಂದು ನಾರಾಯಣಸ್ವಾಮಿ ದೂರಿದ್ದರು.

ಸಿ.ಎ. ಸೈಟು ಪಡೆಯಲು ಕಾನೂನು ಕ್ರಮಗಳಿವೆ, ಸಾಮಾಜಿಕ ಚಟುವಟಿಕೆ, ರಂಗಮಂದಿರ, ಆಸ್ಪತ್ರೆ ಸೇರಿದಂತೆ ನಿಗದಿತ ಉದ್ದೇಶಕ್ಕೆ ಇವನ್ನು ಮೀಸಲಾಗಿ ಇಡಲಾಗುತ್ತದೆ.

ಸಾಮಾನ್ಯ ಜನರು ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಿ ಪ್ರಭಾವಿಗಳಿಗೆ ಹಂಚಿಕೆ ಮಾಡಲಾಗಿದೆ, ಇದರಿಂದ ಅನುಮಾನಗಳು ಸೃಷ್ಟಿಯಾಗಿವೆ ಎಂದು ಹೇಳಲಾಗಿತ್ತು.

ಬುದ್ಧ ವಿಹಾರ ಕಟ್ಟಲು ಸಿದ್ಧಾರ್ಥ ವಿಹಾರ ಟ್ರಸ್ಟ್ ಕಲಬುರಗಿಯಲ್ಲಿ ನೋಂದಣಿಯಾಗಿದೆ, ಇದೊಂದು ಧಾರ್ಮಿಕ ಟ್ರಸ್ಟ್. ಆದರೆ, ಏರೋಸ್ಪೇಸ್‌ಗೆ ಸಂಬಂಧಿಸಿದ ನಿವೇಶನ ಪಡೆದಿದ್ದಾರೆ ಎಂದು ದೂರು ದಾಖಲಿಸಿದ್ದರು.

ಇದಕ್ಕೆ ಸಂಬಂಧಿಸಿದಂತೆ ಉಭಯ ಸಚಿವರುಗಳು ಸುದ್ದಿಗೋಷ್ಠಿಯಲ್ಲಿ ಪ್ರತ್ಯೇಕವಾಗಿ ವಿವರಣೆ ನೀಡಿ, ಬಿಜೆಪಿ ಆರೋಪಗಳನ್ನು ತಳ್ಳಿಹಾಕಿದ್ದಲ್ಲದೆ, ನಿಯಮಾನುಸಾರವೇ ಅರ್ಹರಿಗೆ ನಿವೇಶನಗಳನ್ನು ನೀಡಲಾಗಿದೆ ಹಾಗೂ ಸಂಸ್ಥೆ ಪಡೆದುಕೊಂಡಿದೆ ಎಂದು ಸಮರ್ಥಿಸಿಕೊಂಡಿದ್ದರು.

## ರಾಜ್ಯ ಮಟ್ಟದ ಪವರ್ ಲಿಫ್ಟಿಂಗ್ ಬೆಂಚ್‌ಪ್ರೆಸ್ ಸ್ಪರ್ಧೆ ಮಗನಿಗೆ 2 ಚಿನ್ನ, ಅಪ್ಪನಿಗೆ 2 ಕಂಚು





ದಾವಣಗೆರೆ, ಸೆ. 23- ಉಡುಪಿ ಜಿಲ್ಲೆಯ ಸಾಲಿಗ್ರಾಮದಲ್ಲಿ ಕಳೆದ ವಾರ ನಡೆದ 2024-25ರ ರಾಜ್ಯಮಟ್ಟದ ಪವರ್ ಲಿಫ್ಟಿಂಗ್ ಬೆಂಚ್‌ಪ್ರೆಸ್ ಸ್ಪರ್ಧೆಯಲ್ಲಿ ಶ್ರೀ ಕನ್ನಿಕಾಪರಮೇಶ್ವರಿ ಕೋ - ಆಪರೇಟಿವ್ ಬ್ಯಾಂಕಿನ ಉದ್ಯೋಗಿ ವಿ. ರಕ್ಷಿತ್ ಹಾಗೂ ಶ್ರೀ ಬೀರೇಶ್ವರ ವ್ಯಾಯಾಮ ಶಾಲೆಯ ಕ್ರೀಡಾಪಟು ಅವರು 93 ಕೆ.ಜಿ. ತೂಕದಲ್ಲಿ ಕ್ರಮವಾಗಿ 2 ವಿಭಾಗಗಳ ಸ್ಪರ್ಧೆಯಲ್ಲಿ ಸ್ಪರ್ಧಿಸಿ 182.5 ಕೆ.ಜಿ. ಮತ್ತು 140 ಕೆ.ಜಿ. ಭಾರ ಎತ್ತಿ ಎರಡೂ ವಿಭಾಗಗಳಲ್ಲಿಯೂ ವಿಜೇತರಾಗಿ 2 ಚಿನ್ನದ ಪದಕ ಗಳಿಸಿದ್ದಾರೆ.

ಇದೇ ಸ್ಪರ್ಧೆಯಲ್ಲಿ ರಕ್ಷಿತ್ ಅವರ ತಂದೆ ಕ್ರೀಡಾ ತರಬೇತುದಾರ ಪಿ. ವಿಶ್ವನಾಥ್ ಈ ಎರಡೂ ವಿಭಾಗಗಳ ಸ್ಪರ್ಧೆಯಲ್ಲಿ ಸ್ಪರ್ಧಿಸಿ 2 ಕಂಚಿನ ಪದಕ ಪಡೆದಿದ್ದು, ಬರುವ ಅಕ್ಟೋಬರ್ 14 ರಿಂದ 18ರವರೆಗೆ ಗೋವಾದಲ್ಲಿ ನಡೆಯಲಿರುವ 2024-25ರ ರಾಷ್ಟ್ರಮಟ್ಟದ ಪವರ್ ಲಿಫ್ಟಿಂಗ್ ಬೆಂಚ್‌ಪ್ರೆಸ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ವಿಜೇತರಾದ ತಂದೆ - ಮಗನನ್ನು ಶ್ರೀ ಕನ್ನಿಕಾಪರಮೇಶ್ವರಿ ಕೋ ಆಪರೇಟೀವ್ ಬ್ಯಾಂಕಿನ ಅಧ್ಯಕ್ಷ ಆರ್.ಜಿ. ಶ್ರೀನಿವಾಸ ಮೂರ್ತಿ, ಮಾಜಿ ಅಧ್ಯಕ್ಷ ಆರ್.ಎಲ್ ಪ್ರಭಾಕರ್, ಮೇಯರ್ ಬಿ. ಹೆಚ್. ವಿನಾಯಕ, ಶಶಿ ಸೋಪ್ ಸಂಸ್ಥೆಯ ಮಾಲೀಕ ರವಿ ಇಳಂಗೋ, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ದೂಡಾ ಮಾಜಿ ಅಧ್ಯಕ್ಷ ದೇವರಮನಿ ಶಿವಕುಮಾರ್, ಪೊಲೀಸ್ ಅಧಿಕಾರಿ ಮತ್ತು ಕ್ರೀಡಾಪಟು ದಂಪತಿಗಳಾದ ಹೆಚ್. ದಾದಾಪೀರ್ ಮತ್ತು ಕೆ.ಎನ್. ಶೈಲಜಾ ದಾದಾಪೀರ್, ಪಾಲಿಕೆ ಸದಸ್ಯ ಜೆ.ಎನ್ ಶ್ರೀನಿವಾಸ್, ದೂಡಾ ಮಾಜಿ ಅಧ್ಯಕ್ಷ ಡಿ. ಮಾಲತೇಶ್ ಪೈಲ್ವಾನ್ ಅಭಿನಂದಿಸಿದ್ದಾರೆ.


**IN THE COURT OF THE PRINCIPAL SENIOR CIVIL JUDGE AND CJM AT DAVANGERE**

S.C.No. 54 of 2023

**Plaintiff : Canara Bank,** Vinobanagara Branch V/s
**Defendants : Shilpa M. D/o Manjunatha A**
**Defendant : Shilpa M. D/o Manjunatha A,** Business (Beauty Parlour), 2nd Main, 7th Cross, Vijayanagara Extension, Harihara.

**Summons under order 5 Rule 20(1)(a) of CPC**

Whereas, the plaintiff Canara Bank, Vinobanagara Branch, Davangere has instituted the suit against you for the recovery a sum of R.s 78,994/- and for court costs and such other reliefs. You the defendant hereby summoned to appear in this court in peroson or by a pleader duly instructed and able to answer all your material questions relating to the said suit who shall be accompanied by some person able to answer all such questions, on the 25.10.2024 at Davangere in the forenoon 11 O' Clock to answer the claim and as the day fixed for your appearance is appointed for the final disposal of the suit

Take notice that in default of your appearance on the day before mentioned, the suit will be heard and determined in your absence.

Given under my hand and seal of the court this 18th day of September 2024

*Sd/-* **GOPALA M.**
Advocate for Plaintiff
**Davangere**
**Date : 18.09.2024**

***BY THE ORDER OF THE COURT***
***Sd/-* CHIEF MINISTRIAL OFFICER**
Principal Senior Civil Judge and CJM Court Davangere.



# ಶ್ರೀಮತಿ ವಿಮಲಾಕ್ಷಿ ನಿಧನ

ದಾವಣಗೆರೆ ಸಿಟಿ ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತ,
ಕೆ.ಎಸ್.ಎಸ್. ಕಾಲೇಜ್ ಹತ್ತಿರದ (#1309/29) 'ನಂದಿ' ನಿವಾಸದ ವಾಸಿ
ನಿವೃತ್ತ ಪ್ರಾಂಶುಪಾಲರಾದ ಶ್ರೀ ನುಚ್ಚಿನ ಚಿದಾನಂದಪ್ಪ ಇವರ ಧರ್ಮಪತ್ನಿ

**ಶ್ರೀಮತಿ ವಿಮಲಾಕ್ಷಿ** ಅವರು

ದಿನಾಂಕ 23-09-2024ರ ಸೋಮವಾರ ರಾತ್ರಿ 10.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 74 ವರ್ಷ ವಯಸ್ಸಾಗಿತ್ತು.
ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24-09-2024ರ ಮಂಗಳವಾರ ಮಧ್ಯಾಹ್ನ 1.30 ಗಂಟೆಗೆ ಶಾಮನೂರು ಗ್ಲಾಸ್‌ಹೌಸ್ ಬಳಿ ಇರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. : 9449978543, 9480456888, 9036946960


Aaraike Hospitals

HCG The Specialist in Cancer Care
adding life to years

HCG ಕ್ಯಾನ್ಸರ್ ಕೇರ್‌ನಿಂದ ನಮ್ಮ ಅನುಭವಿ
ಆಂಕೊಲಾಜಿಸ್ಟ್ ಅನ್ನು ನಿಮ್ಮ ನಗರದಲ್ಲಿ ಭೇಟಿ ಮಾಡಿ

ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್



ವಿಳಾಸ
ಆರೈಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್
ಕ್ರೀಡಾಂಗಣದ ಎದುರು, ಹವಾಯಿ ರಸ್ತೆ.
ದಾವಣಗೆರೆ - 577001

ಭೇಟಿ ಸಮಯ
DATE : 25 Sep 2024, Wednesday
TIME : 11:00 AM - 02:00 PM

Dr Basanth Mahadevappa
Consultant Liver Transplant Surgeon
HCG Cancer Centre, KR Road
Bangalore, Karnataka

For Appointment, Contact
7829434249

www.hcgoncology.com

AHMEDABAD | BENGALURU | BHAVNAGAR | CHENNAI | CUTTACK | HUBBALLI | INDORE | JAIPUR | KALABURAGI | KENYA | KOLKATA | MUMBAI | MYSORE | NAGPUR | NASHIK | ONGOLE | RAJKOT | RANCHI | SHIMOGA | VADODARA | VIJAYAWADA | VIZAG


# ವಿದೇಶ ಪ್ರಯಾಣ ಶುಭ ಹಾರೈಕೆ



**ಚಿ|| ಅಭಿಷೇಕ್ ವೈ.ಎಸ್**

ಸಾಫ್ಟ್‌ವೇರ್ ಇಂಜಿನಿಯರ್, ಇನ್‌ಫೋಸಿಸ್ ಮೈಸೂರು

ಶ್ರೀಮತಿ ವಾಣಿಶ್ರೀ ವೈ. ಎಸ್. ಹಾಗೂ ದಿ. ಶ್ರೀ ಶಿವಯೋಗಿ ವೈ.ಜೆ. ಇವರ ಸುಪುತ್ರ.
ಇವರು ಮೈಸೂರು ಇನ್‌ಫೋಸಿಸ್ ಕಂಪನಿ ವತಿಯಿಂದ ಹೆಚ್ಚಿನ ಕಾರ್ಯ ನಿಭಾಯಿಸಲು ದಿನಾಂಕ 25.9.2024ರಂದು ಬೆಂಗಳೂರಿನಿಂದ ಸ್ವಿಟ್ಜರ್‌ಲ್ಯಾಂಡ್‌ಗೆ ಪ್ರಯಾಣ ಬೆಳೆಸುತ್ತಿದ್ದಾರೆ. ಇವರ ವಿದೇಶ ಪ್ರಯಾಣ ಸುಖಕರವಾಗಿರಲೆಂದು ಹಾರೈಸಿ, ಶುಭಾಶಯಗಳನ್ನು ಕೋರುತ್ತಿರುವವರು.

ಅಜ್ಜ-ಅಜ್ಜಿಯಂದಿರಾದ : ಶ್ರೀಮತಿ ಪ್ರೇಮಲೀಲಾ, ದಿ. ಜಂಬುಕೇಶ್ವರಯ್ಯನವರು, Rtd. EE ದಾವಣಗೆರೆ
ಶ್ರೀಮತಿ ಗಿರಿಜಮ್ಮ, ದಿ. ಎ.ಎಮ್. ಚಂದ್ರಶೇಖರಯ್ಯನವರು ನಿವೃತ್ತ ಹೆಚ್.ಎಂ. ಮತ್ತು ಕುಟುಂಬದವರು, ದಾವಣಗೆರೆ
ದಿ. ಶ್ರೀಮತಿ ಪಾರ್ವತಿ, ಶ್ರೀ ಶಾಂತವೀರಯ್ಯ ಹಿರೇಮಠ ನಿವೃತ್ತ ಹೆಚ್.ಎಂ. ಮತ್ತು ಕುಟುಂಬದವರು, ಅತ್ತಿಗೇರಿ (ಶಿಗ್ಗಾಂವಿ)
ದೊಡ್ಡಮ್ಮ-ದೊಡ್ಡಪ್ಪರಾದ : ಶ್ರೀಮತಿ ವೀಣಾ, ಶ್ರೀ ಎಸ್.ಎಂ. ವಿಜಯಕುಮಾರ್ ಮತ್ತು ಕುಟುಂಬದವರು ಶಿರಮಗೊಂಡನಹಳ್ಳಿ.
ಚಿಕ್ಕಮ್ಮ-ಚಿಕ್ಕಪ್ಪರಾದ : ಶ್ರೀಮತಿ ಸೌಭಾಗ್ಯ ವೈ.ಜೆ., ಶ್ರೀ ಗಿರೀಶ್ ವೈ.ಜೆ., ದಾವಣಗೆರೆ.
ತಮ್ಮ-ತಂಗಿಯರಾದ : ಚಿ|| ಆಕಾಶ್ ವೈ.ಎಸ್., ಕು|| ಸಿಂಚನ ವೈ.ಜೆ. ಕು|| ಅಪೂರ್ವ ವೈ.ಜೆ. ದಾವಣಗೆರೆ

**ಹಾಗೂ ಎರೆಭೈರಾಪುರ ಮಠದ ಬಂಧು ಮಿತ್ರರು.**

|| ಶಿವ || || ಶ್ರೀ ಕೋಗುಂಡೆ ಬಸವೇಶ್ವರ ಪ್ರಸನ್ನ || || ಶಿವ ||



# ಕೈಲಾಸ ಶಿವಗಣಾರಾಧನೆ





ಜನನ : 08-05-1934 ಮರಣ : 21-09-2021

ದಾವಣಗೆರೆ ತಾ|| & ಜಿ|| ಕಬ್ಬೂರು ಗ್ರಾಮದ ವಾಸಿ ದಿ|| ಶ್ರೀ ಕೆ.ಜಿ. ಬಸವರಾಜಪ್ಪನವರ ಮಗನಾದ
**ಶ್ರೀ ಕೆ.ಬಿ. ಶಶಿಧರ ಮತ್ತು ಸಹೋದರರು**
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 16-09-2024ನೇ ಸೋಮವಾರ ರಾತ್ರಿ 9 ಗಂಟೆಗೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಪಾರ್ವತಮ್ಮ**

(ದಿ|| ಶ್ರೀ ಕಬ್ಬೂರು ಬಸವರಾಜಪ್ಪನವರ ಧರ್ಮಪತ್ನಿ)

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**

**ದಿನಾಂಕ : 24-09-2024ನೇ ಮಂಗಳವಾರ ಬೆಳಗ್ಗೆ 10.30 ಕ್ಕೆ ದಾವಣಗೆರೆ ಕಿರುವಾಡಿ ಲೇಔಟ್‌ನಲ್ಲಿರುವ ಮೃತರ ಸ್ವಗೃಹದಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು, ಗಂಗಜ್ಜರ ದಿ|| ಶ್ರೀ ಹನುಮಂತಪ್ಪ ಮತ್ತು
ದಿ|| ಶ್ರೀ ವೀರಭದ್ರಪ್ಪನವರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು,
ದಿ|| ಶ್ರೀಮತಿ ಪಾರ್ವತಮ್ಮ ದಿ|| ಕೆ.ಜಿ. ಬಸವರಾಜಪ್ಪನವರ ಮಕ್ಕಳು,
ಗಂಗಜ್ಜರ ವಂಶಸ್ಥರು ಮತ್ತು ಕಬ್ಬೂರು ಗ್ರಾಮಸ್ಥರು ಹಾಗೂ ಬಂಧು - ಮಿತ್ರರು.

ವಿಶೇಷ ಸೂಚನೆ : ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

ಇಂದ : ಶ್ರೀ ಕೆ.ಬಿ. ಶಶಿಧರ ಮತ್ತು ಸಹೋದರರು
ಕಿರುವಾಡಿ ಲೇಔಟ್, ಕೆ.ಬಿ. ಬಡಾವಣೆ, ದಾವಣಗೆರೆ.
ಮೊ. : 9740101605, 9449674899.

# Condolences



**K. Banumathi Shashidhar**

*We all miss you*

**KIDZEE FAMILY**
**KIDZEE PRE SCHOOL**
Vidyanagar Nagar, Davangere

# ಭಾವಪೂರ್ಣ ಶ್ರದ್ಧಾಂಜಲಿ



**ದಿ|| ಶ್ರೀ ಟಿ.ದಾಸಕರಿಯಪ್ಪನವರು**

ದಾವಣಗೆರೆ ನಗರದ ವೀರಮದಕರಿ ನಾಯಕ ವೃತ್ತದ (ಹೊಂಡದ ಸರ್ಕಲ್) ಜೈಹಿಂದ್ ಕೆರೆಗರಡಿ ಮನೆ ಅಧ್ಯಕ್ಷರು, ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಹಿರಿಯ ಮುಖಂಡರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು, ಹಿರಿಯ ಕುಸ್ತಿಪಟುಗಳು, ರಾಜಕೀಯ ಧುರೀಣರು ಆದ

**ಶ್ರೀ ಟಿ. ದಾಸಕರಿಯಪ್ಪನವರು**

ನಿಧನರಾಗಿದ್ದು, ಶ್ರೀಯುತರ ಅಗಲಿಕೆಯಿಂದ ಸಮಾಜಕ್ಕೆ ಹಾಗೂ ಜೈಹಿಂದ್ ಕೆರೆಗರಡಿ ಮನೆಗೆ, ಕುಸ್ತಿ ಕ್ರೀಡಾ ಪಟುಗಳಿಗೆ ತುಂಬಲಾರದ ನಷ್ಟವಾಗಿದೆ. ಅಪ್ಪಟ ಕುಸ್ತಿಪಟುಗಳಾಗಿದ್ದ ಶ್ರೀಯುತರಿಂದ ರಾಜ್ಯಾದ್ಯಂತ ಅಪಾರ ಕುಸ್ತಿ ಪಟುಗಳು ಇರವ ಗರಡಿಯಲ್ಲಿ ಪಳಗಿದ್ದವರಾಗಿದ್ದು, ಇವರ ಅಗಲಿಕೆಯಿಂದ ತುಂಬಲಾರದ ನಷ್ಟವುಂಟಾಗಿದ್ದು, ಇಂತಹ ಕುಸ್ತಿಪಟುಗಳು ಮತ್ತೊಮ್ಮೆ ಹುಟ್ಟಿ ಬರಲೆಂದು ಹಾಗೂ ಮೃತರ ಕುಟುಂಬ ವರ್ಗಕ್ಕೆ ಅಗಲಿಕೆಯ ನೋವು ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.

ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುವವರು

**ಜೈಹಿಂದ್ ಕೆರೆಗರಡಿ ಮನೆ ಸೇವಾ ಸಂಘ (ರಿ). ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಕೆರೆಗರಡಿ ಮನೆ ಯಜಮಾನರು ಮತ್ತು ಹಿರಿಯ, ಕಿರಿಯ, ಹಾಲಿ ಮತ್ತು ಮಾಜಿ ಕುಸ್ತಿ ಕ್ರೀಡಾಪಟುಗಳು, ವೀರಮದಕರಿ ನಾಯಕ ವೃತ್ತ (ಹೊಂಡದ ಸರ್ಕಲ್) ದಾವಣಗೆರೆ.**

# ಭಾವಪೂರ್ಣ ಶ್ರದ್ಧಾಂಜಲಿ



**ದಿ|| ಶ್ರೀ ಟಿ.ದಾಸಕರಿಯಪ್ಪನವರು**

ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಹಿರಿಯ ಮುಖಂಡರು ಹಾಗೂ ಮಾಜಿ ತಾಲ್ಲೂಕು ನಾಯಕ ಸಮಾಜದ ಅಧ್ಯಕ್ಷರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು, ರಾಜಕೀಯ ಧುರೀಣರು, ಹಿರಿಯ ಕುಸ್ತಿಪಟುಗಳಾದ

**ಶ್ರೀ ಟಿ. ದಾಸಕರಿಯಪ್ಪನವರು** ನಿಧನರಾಗಿದ್ದು,

ಮೃತರ ಅಗಲಿಕೆಯಿಂದ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜಕ್ಕೆ ತುಂಬಲಾರದ ನಷ್ಟವುಂಟಾಗಿದ್ದು, ಮೃತರ ಕುಟುಂಬ ವರ್ಗಕ್ಕೆ ಇವರ ಅಗಲಿಕೆಯ ನೋವು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ.

ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುವವರು

ಅಧ್ಯಕ್ಷರು/ಕಾರ್ಯದರ್ಶಿ ಆಡಳಿತ ಮಂಡಳಿ ಸದಸ್ಯರು, ನಾಯಕ ವಿದ್ಯಾರ್ಥಿ ನಿಲಯ, ದಾವಣಗೆರೆ.
ಅಧ್ಯಕ್ಷರು/ಕಾರ್ಯದರ್ಶಿ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜ(ರಿ.) ದಾವಣಗೆರೆ
ಅಧ್ಯಕ್ಷರು/ಕಾರ್ಯದರ್ಶಿ ಆಡಳಿತ ಮಂಡಳಿ ಸದಸ್ಯರು, ದಾವಣಗೆರೆ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ(ರಿ.) ದಾವಣಗೆರೆ
ಅಧ್ಯಕ್ಷರು/ಕಾರ್ಯದರ್ಶಿ ಆಡಳಿತ ಮಂಡಳಿ ಸದಸ್ಯರು, ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕ ದಾವಣಗೆರೆ
ಅಧ್ಯಕ್ಷರು/ಕಾರ್ಯದರ್ಶಿ ಆಡಳಿತ ಮಂಡಳಿ ಸದಸ್ಯರು, ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಮಹಿಳಾ ಸಮಾಜ(ರಿ.) ದಾವಣಗೆರೆ
ಅಧ್ಯಕ್ಷರು/ಕಾರ್ಯದರ್ಶಿ ಆಡಳಿತ ಮಂಡಳಿ ಸದಸ್ಯರು, ಮಹರ್ಷಿ ವಾಲ್ಮೀಕಿ ಗೆಜೆಟೆಡ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ(ರಿ.) ದಾವಣಗೆರೆ ಜಿಲ್ಲಾ ಘಟಕ
ಅಧ್ಯಕ್ಷರು/ಕಾರ್ಯದರ್ಶಿ ಆಡಳಿತ ಮಂಡಳಿ ಸದಸ್ಯರು, ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಸಂಘ, ಜಿಲ್ಲಾ ಘಟಕ ದಾವಣಗೆರೆ
ಅಧ್ಯಕ್ಷರು/ಕಾರ್ಯದರ್ಶಿ ಆಡಳಿತ ಮಂಡಳಿ ಸದಸ್ಯರು, ಅಖಿಲ ಭಾರತ ವಾಲ್ಮೀಕಿ ವಕೀಲರ ವೇದಿಕೆ ಹಾಗೂ ಸಮಸ್ತ ನಾಯಕ ಸಮಾಜದ ಬಾಂಧವರು

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas